بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 08

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**24 ಫೆಬ್ರವರಿ 2022, 24 ಸುಲಹ್ 1401 ತಬ್‌ಲೀಗ್ ಹಿಜರಿ ಶಮ್‌ಸಿ, 22 ರಜಬ್ 1443 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَلَقَدِ اسْتُهْزِئَ بِرُسُلٍ مِّنْ قَبْلِكَ
فَحَاقَ بِالَّذِيْنَ سَخِرُوْا مِنْهُمْ مَّا
كَانُوْا بِهٖ يَسْتَهْزِءُوْنَ

**(ಅಲ್‌ಅನ್‌ಆಂ : 11)**

**ಅಂದರೆ: (ಎಲೈ ಪ್ರವಾದಿಯೇ,) ನಿನಗೆ ಮುಂಚೆ ಸಹ ಪ್ರವಾದಿಗಳು ಅಪಹಾಸ್ಯಕ್ಕೆ ಗುರಿಯಾಗಿದ್ದಾರೆ. ಅದರ ಫಲವಾಗಿ, ಅವರು ಏನನ್ನು ಅಪಹಾಸ್ಯ ಮಾಡುತ್ತಿದ್ದರೋ ಅದು (ಆ ಶಿಕ್ಷೆ) ಅವರಲ್ಲಿ ಅಪಹಾಸ್ಯ ಮಾಡಿದವರನ್ನೇ ಸುತ್ತುವರಿಯಿತು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಪವಿತ್ರ ನಗರ ಮದೀನ

(1567) ಹಝ್ರತ್ ಅನಸ್ (ರ) ವರದಿ ಮಾಡುತ್ತಾರೆ. ಅವರು ನಬಿ(ಸ) ರವರಿಂದ ವರದಿ ಪಡೆದು ಹೇಳುತ್ತಾರೆ. ಅವರು (ಸ) ಹೇಳಿದರು. ಮದೀನ ಪವಿತ್ರ ನಗರವಾಗಿದೆ. ಇಲ್ಲಿಂದ ಅಲಿಯುವರೆಗೆ ವರಕ್ಷಗಳನ್ನು ಕಡಿಯಬರದು. ಅದರಲ್ಲಿ ನವಿಚಾರಣೆಗೂ ಆಸ್ಪದವಿಲ್ಲ. ಯೇಸು ಇಲ್ಲಿ ನವಿತಾಚಾರಣೆ ಮಾಡುತ್ತಾರೆ. ಅದರ ಮೇಲೆ ಅಲ್ಲಾಹನ ಮತ್ತು ಅವರ ಹೋತರ ಮತ್ತು ಎಲ್ಲಿ ಜನರ ಶಾಪವಿರುವುದು.

(1868) ಹಝ್ರತ್ ಅನಸ್ (ರ) ವರದಿ ಮಾಡುತ್ತಾರೆ. ನಬಿ (ಸ) ಮದೀನ ಆಗಮಿಸಿದನು ಮತ್ತು ಮಸೀದಿ ನಿರ್ಮಾಣ ಮಾಡಲು ಆಜ್ಞೆನೀಡಿದರು ಮತ್ತು ನುಡಿದರು. ಬನಿ ನಜ್ಜಾರ್ ! ನನ್ನಿಂದ ( ಈ ಜಾಗದ ) ಬೆಲೆ ನಿರ್ಧರಿಸಿಕೊಳ್ಳಿ ಆಗ ಅವರು ಹೇಲಿದರು. ನಾವು ಅದರ ಬೆಲೆ ಪಡೆಯುವುದಿಲ್ಲ ಆದರೆ ಅಲ್ಲಾಹನಿಂದ ಮಾತ್ರ. ಆಗ ಅವರು ಬಹುದೇವಾರಾಧಕರ ಗೋರಿಗಳ ಪೈಕಿ ಹೇಳಿದರು. ಮತ್ತು ಅದನ್ನು ತೋಡಿ ಎಂದು ಇತ್ಯಾದಿಯನ್ನು ಹೊರ ತೆಗೆದು ಮತ್ತು ಸ್ಮಶಾನದ ಬಗ್ಗೆ ಹೇಳಿದರು. ಅದು ನೆಲಸವು ಮಾಡಲಾಗಿತ್ತು. ಮತ್ತು ಖರ್ಜೂರ ಮತಗಳ ಬಗ್ಗೆ ಹೇಳೀದರು ಅದು ಕಡಿಯಲ್ಪಟ್ಟಿವೆ ಮತ್ತು ಮಸೀದಿಯ ಕೊನೆಯ ಭಗದಲ್ಲಿ ಸಾಲಾಗಿ ಇಟ್ಟುಕೊಂಡಿದ್ದರು

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

## ಮನುಷ್ಯನು ಲಾ ಇಲಾಹ ಇಲ್ಲಲ್ಲಾಹ್ ಎಂದ ಮೇಲೆ ಅವನ ದೃಷ್ಟಿಯಲ್ಲಿ ಎಲ್ಲವು ಗೌಣವಾಗಿ ಕಂಡುಬರುತ್ತದೆ ಮತ್ತು ಅವನ ಶೌರ್ಯದಿಂದ ಕಾರ್ಯ ನಿರ್ವಹಿಸುತ್ತಾನೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಹಗಲಿರುಳು ಮುಸ್ಲಿಮರಿಗೆ ಕಲಿಮ ತಯ್ಯಿಬಾ (ಲಾ ಇಲಾಹ ಇಲ್ಲಾಹ್) ಹೇಳಲು ತಿಳಿಸಿರುವ ಉದ್ದೇಶವೇನೆಂದರೆ ಅದರ ಉಚ್ಚಾರವಿಲ್ಲದಿದ್ದರೆ ಯಾವ ಶೌರ್ಯವು ಹುಟ್ಟುವುದಿಲ್ಲ. ಮನುಷ್ಯನು ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿದ ಮೇಲೆ ಎಲ್ಲಾ ಮನುಷ್ಯರ ಮತ್ತು ವಸ್ತುಗಳ ಮತ್ತು ಅಧಿಕಾರಿಗಳ, ಸರಕಾರಗಳ ಹಾಗೂ ಶತ್ರುಗಳ ಮತ್ತು ಮಿತ್ರರ ಶಕ್ತಿ ಮತ್ತು ಬಲವನ್ನು ಗೌಣವೆಂದು ಭಾವಿಸಿ ಮನುಷ್ಯನು ಕೇವಲ ಅಲ್ಲಾಹನನ್ನು ಗುರಿಯಾಗಿಸಿಕೊಳ್ಳುತ್ತಾನೆ. ಮತ್ತು ಅವನ ಹೊರತು ಅವರ ದೃಷ್ಟಿಯಲ್ಲಿ ಗೌಣವಾಗಿ ಬಿಡುತ್ತದೆ. ಆಗ ಅವನು ಶೌರ್ಯ ಮತ್ತು ಸಾಹಸದಿಂದ ಕಾರ್ಯ ನಿರ್ವಹಿಸುತ್ತಾನೆ ಮತ್ತು ಯಾರೂ ಹೆದರಿಸಿದರೂ ಅವನು ಹೆದರುವುದಿಲ್ಲ.

**"ತೀಕ್ಷಣ ಗ್ರಹಿಕೆ"**

ತೀಕ್ಷಣ ಗ್ರಹಿಕೆಯು ಒಂದು ವಸ್ತುವಾಗಿದೆ. ಉದಾಹರಣೆಗೆ ಯಹೂದಿಯೊಬ್ಬನು ಹಝ್ರತ್ ರಸೂಲೆ ಕರೀಮ್(ಸ) ರವರನ್ನು ನೋಡುತ್ತಲೇ ಹೇಳಿದರು. ಅವರಲ್ಲಿ ಪ್ರವಾದಿತ್ವದ ಗುಣಗಳಿವೆ. ಅಂತೆಯೇ ಮುಬಾಹಲ ಸಮಯ ಕ್ರೈಸ್ತರು ಹಝ್ರತ್ ರಸೂಲುಲ್ಲಾಹ್(ಸ) ರವರ ಮುಂದೆ ಬರಲಿಲ್ಲ. ಏಕೆಂದರೆ ಅವರ ಸಲಹೆಗಾರರು ಅವರಿಗೆ ಹೇಳಿದರು. ನಾನು ಅವರಲ್ಲಿ ಈ ಪರ್ವತವನ್ನು ಇಲ್ಲಿಂದ ಅಲ್ಲಾಡು ಎಂದರೆ ಅಲ್ಲಾಡಿ ಬಿಡುತ್ತದೆ.

ಮತ್ತೆ ಹೇಳುತ್ತಾರೆ: "ಯಾರೊಬ್ಬನ ಹೃದಯದಲ್ಲಿ ಒಂದಿಷ್ಟಾದರೂ ಆಧ್ಯಾತ್ಮಿಕತೆ ಇದ್ದರೆ ಅವನು ನನ್ನನ್ನು ಸ್ವೀಕರಿಸುವನು."

**ಉಪದೇಶಗಳ ಕುರಿತು ಗ್ರಂಥ ಬರೆಯುವ ಆಶೆ**

ನಾನು ಒಂದು ಉಪದೇಶಾತ್ಮಕ ಗ್ರಂಥವನ್ನು ಬಯಸುತ್ತೇನೆ. ಮೌಲ್ವಿ ಮುಹಮ್ಮದ್ ಅಲಿ ಸಾಹಿಬ್ ಅದರ ಅನುವಾದ ಬರೆಯಲಿ. ಆ ಗ್ರಂಥದಲ್ಲಿ ಮೂರು ಭಾಗಗಳಿರುವುವು. ಒಂದು ಅಲ್ಲಾಹನ ಪ್ರತಿ ನಮ್ಮ ಕರ್ತವ್ಯಗಳಾವುವು ಮತ್ತು ಎರಡನೆಯದಾಗಿ ನಮ್ಮ ಆತ್ಮಗಳ ಮೇಲೆ ನಮಗೆ ಯಾವ ಹಕ್ಕುಗಳಿವೆ ಮತ್ತು ಮಾನವ ಕುಲ ಕುರಿತು ಯಾವ ಯಾವ ಹಕ್ಕುಗಳಿವೆ.

**ಸಜ್ಜನರ ಪವಾಡಗಳು**

ಪ್ರವಾದಿತ್ವ ಕಾಲವು ಪ್ರಕಾಶಭರಿತವಾಗಿತ್ತು. ಅದೊಂದು ಸೂರ್ಯನಂತಾಗಿತ್ತು. ಅದರ ನಂತರದ ಸಜ್ಜನರು ತೋರಿಸಿದಂತಹ ಪವಾಡಗಳು ಅದರ ಜೊತೆಯಲ್ಲಿ ರಹಸ್ಯಗಳನ್ನು ಹೊಂದಿರಲಿಲ್ಲ. ಮತ್ತು ಅದರ ಸರಿಯಾದ ತಾರೀಖಿನ ವಿವರ ಇರಲಿಲ್ಲ. ಹಾಗೆ ಶೇಖ್ ಅಬ್ದುಲ್ ಖಾದಿರ್ ಜೀಲಾನಿ(ರ) ರವರ ಪವಾಡಗಳು ಎರಡು ನೂರು ವರ್ಷಗಳ ನಂತರ ಬರೆದದ್ದಾಗಿದೆ. ಅದಲ್ಲದೆ ಆ ಜನರಿಗೆ ಯಾವ ವಿರೋಧಿಗಳೊಡನೆ ಸ್ಪರ್ಧಿಸುವ ಸಂದರ್ಭ ಒದಗಿ ಬಂದಿರಲಿಲ್ಲ. ಯಾವುದೇ ಅಂತಹ ಗೊಂದಲವು ಉಂಟಾಗಿರಲಿಲ್ಲ. ನಮಗೆ ಒದಗಿ ಬಂದ ಹಾಗೆ.

**(ಮಲ್ಫೂಝಾತ್, ಸಂಪುಟ-1, ಪುಟ-354, 2018 ಖಾದಿಯಾನ್ ಮುದ್ರಣ)**

**ಎಲ್ಲ ಮನುಷ್ಯರಲ್ಲಿಯೂ ಅಲ್ಲಾಹನ ಪ್ರೇಮದ ಅಂಶವಿರುತ್ತದೆ.
ಆದರೆ ಯಾವ ಮನುಷ್ಯನು ಆಧ್ಯಾತ್ಮಿಕ ಆಹಾರ ಸೇವಿಸುತ್ತಾನೋ ಅವನ ಚಿಂತನಶಕ್ತಿಯಲ್ಲಿ ಹೊಸ ಪ್ರಕಾಶ ಮತ್ತು ಜೀವಕಳೆ ಉತ್ಪನ್ನವಾಗುತ್ತದೆ. ಬೇರೆಯವನಿಗೆ ಅಲ್ಲ.**

ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್ (ರ) ಸೂರ: ಅನ್ನಹ್ಲ್ ವಚನ 12 **ಯುಂಬಿತು ಲಕುಂ ಬಿಹಿ ಅಜ್ಝರ್‌ಅ ವಝ್ಝೈತೂನ ವನ್ನಖೀಲ ವಲ್‌ಅಅ್‌ನಾಬ ವಮಿನ್ ಕುಲ್ಲಿಸ್ಸಮರಾತಿ, ಇನ್ನ ಫೀ ಝೀಲಿಕ ಲಆಯತುಲ್ಲಿಖೌಮಿಯ್ಯತಫಕ್ಕರೂನ್** ನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಯಾಖುಆದರೂ ಆಕ್ಷೇಪ ಎತ್ತಬಹುದು. ಮನುಷ್ಯನ ಆಹಾರ ಮಾಂಸಾಹಾರವಲ್ಲ. ಏಕೆಂದರೆ ಬಹು ದಡಡ್ಡ ವರ್ಗವು ಸಸ್ಯಹಾರವೇ ಉಪಯೋಗಿಸುತ್ತವೆ. ಆದರೆ ಈ ಆಕ್ಷೇಪವು ಯೋಚನೆಯ ಕೊರತೆಯಿಂದ ಉಂಟಾದುದಾಗಿದೆ. ಏಕೆಂದರೆ ಯಾಖುಊ ಜಾನುವಾರುಗಳ ಆಹಾಖು ಬಳಕೆ ಮಾಡದಿರುವ ದಾವೆ ಮಾಡುತ್ತಾರೆ. ಅವರು ನಿಸ್ಸಂಶಯವಾಗಿ ಮಾಂಸ ತಿನ್ನುತ್ತಿರಬಹುದು. ಆದರೆ ಅವರ ಮುಖ್ಯ ಆಹಾರವು ಪ್ರಾಣೀ ಆಹಾರವೇ ಆಗಿರುತ್ತದೆ. ತಾಯಿ ಹಾಲು ಉನ್ನದೆ ಇರುವ ಎಷ್ಟು ಮಕ್ಕಳಿರುತ್ತಾರೆ.

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرَّ السُّمُوْمِ عَدَاوَةُ الصُّلَحَاءِ

**ತೌರಾತ್ ಮತ್ತು ಇಂಜೀಲ್ ಖುರ್‌ಆನ್‌ನ ಎದುರು ಎರಡು ಸ್ಪರ್ಧಿಸಲು ಸಾಧ್ಯವೇ?**
**ತೌರಾತ್ ಮತ್ತು ಇಂಜೀಲ್ ಜ್ಞಾನ ಸಾಕ್ಷ್ಯಗಳ ಮುಂದೆ ಸೂರಃ ಫಾತಿಹವನ್ನು ಸಹ ಎದುರಿಸಲು ಶಕ್ತವಲ್ಲ, ಪಾದರಿ ಸಾಹೇಬರುಗಳೆಲ್ಲ ಸೇರಿ ತನ್ನ ಎಲ್ಲ ಗ್ರಂಥಗಳಿಂದ ಕೇವಲ ಸೂರಃ ಫಾತಿಹಾ ಅಷ್ಟೇ ಎದುರಿಸಿ ತೋರಿಸಿದರೆ ಅವರಿಗೆ ಐದು ನೂರು ರೂಪಾಯಿಗಳನ್ನು ಬಹುಮಾನ ನೀಡುವ ವೈಭವಯುತ ಪಂಥಾಹ್ವಾನ ಮತ್ತು ದೃಢ ನಿಶ್ಚಯ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಸಿರಾಜುದ್ದೀನ್ ಈಸಾಯಿ ಕೇ ಚಾರ್ ಸವಾಲೊಂ ಕಾ ಜವಾಬ್" ರೂಹಾನಿ ಖಝಾಈನ್ 12 ರಿಂದ ಪ್ರಸ್ತುತಪಡಿಸುತ್ತಿದ್ದೆವು. ಸಿರಜುದ್ದೀನ್ ಮೊದಲು ಮುಸ್ಲಿಮರಾಗಿದ್ದರು. ಎಫ್.ಎಸ್.ಸಿ ಕಾಲೇಜ್ ಲಾಹೋರಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಕ್ರಿಸ್ತಮತ ಸ್ವೀಕರಿಸಿದ ನಂತರ ಇವರು ಸಿರಜುದ್ದೀನ್ ಈಸಾಯಿ ಆದರು. 1897ರಲ್ಲಿ ಖಾದಿಯಾನಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಸೇವೆಯಲ್ಲಿ ಹಾಜರಾದರು. ಮತ್ತು ಅವರ ಸಹವಾಸದಲ್ಲಿದ್ದು ಮುಸ್ಲಿಮರಾದರು. ಮತ್ತೆ ಲಾಹೋರಿಗೆ ಹಿಂದಿರುಗಿದಾಗ ಪಾದರಿಗಳು ಮತ್ತೆ ಅವರನ್ನು ತನ್ನ ಶಾಲೆಯಲ್ಲಿ ಸಿಕ್ಕಿಹಾಕಿಕೊಂಡರು ಮತ್ತು ಕ್ರೈಸ್ತರಾದರು. ಕ್ರೈಸ್ತರಾದ ನಂತರ ಅವರು ಲಾಹೋರಿನಿಂದ ನಾಲ್ಕು ಪ್ರಶ್ನೆಗಳನ್ನು ಉತ್ತರ ಪಡೆಯಲಿಕ್ಕೋಸ್ಕರ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಸೇವೆಯಲ್ಲಿ ಕಳುಹಿಸಿದರು. ಅವರ ಉತ್ತರಗಳನ್ನು ಬರೆದು ಹಝ್ರತ್ ಮಸೀಹ್ ಮೌಊದ್(ಅ) ಸಾರ್ವಜನಿಕರ ಹಿತದೃಷ್ಟಿಯಿಂದ ಮುದ್ರಣ ಮಾಡಿ ಪ್ರಸಾರ ಮಾಡಿದರು.

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಬಹುಮಾನದ ಪಂಥ್ವಾಹ್ವಾನದಲ್ಲಿ ನುಡಿಯುತ್ತಾರೆ. ತೌರಾತ್ ಮತ್ತು ಇಂಜೀಲ್ ಸೂರಃ ಫಾತಿಹದ ಕೇವಲ 7 ವಚನಗಳನ್ನು ಎದುರಿಸಲು ಸಾಧ್ಯವಾಗದಿರುವಾಗ ಅವರಿಗೆ ಪೂರ್ಣ ಖುರ್‌ಆನ್‌ನ್ನು ಎದುರಿಸಲು ಹೇಗೆ ಸಾಹಸ ತೋರುವರು. ಈ ವಾದದ ಸತ್ಯವನ್ನು ಪ್ರಕಟಪಡಿಸಲು ನಾವು ಹಿಂದಿನ ಸಂಚಿಕೆಯಲ್ಲಿ ತೌರಾತ್ ಮತ್ತು ಇಂಜೀಲ್‌ಗಳನ್ನು ಖುರ್‌ಆನ್‌ಗೆ ಹೋಲಿಸಿ ಒಂದು ನೋಟ ಪ್ರದರ್ಶಿಸಿದೆವು. ಈ ಸಂಚಿಕೆಯಲ್ಲಿ ಇನ್ನಷ್ಟು ಹೋಲಿಕೆ ಮಾಡಿ ಪ್ರಸ್ತುತಪಡಿಸಿದ ನಂತರ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥಾಹ್ವಾನ ಪ್ರಸ್ತುತಪಡಿಸುವೆವು.

### ತೌರಾತ್ ಅನಗತ್ಯ ಕಠಿಣ ನಿರ್ಧಾರದೆಡೆ ಎಳೆಯುತ್ತದೆ ಮತ್ತು ಇಂಜೀಲ್ ಅನಗತ್ಯ ಕ್ಷಮೆಯೆಡೆ ಒತ್ತು ನೀಡುತ್ತದೆ. ಅದಾಗ್ಯೂ ಪವಿತ್ರ ಖುರ್‌ಆನ್ ಸಂದರ್ಭೋಚಿತ ನಿರ್ಣಯ ಕೈಗೊಳ್ಳಲು ಹೇಳುತ್ತದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಂದಹಾಗೆ ಮನುಷ್ಯನು ಸಹಜವಾಗಿ ತಪ್ಪು ಒಪ್ಪುಗಳನ್ನು ಮಾಡುವ ಪ್ರವೃತ್ತಿ ಹೊಂದಿದವರಾಗಿದ್ದಾನೆ. ಮಾನವರು ಸದೈವ ಅಲ್ಲಾಹನ ಆಜ್ಞೆಗಳ ಮೇಲೆ ಸ್ಥಿರವಾಗಿರಲು ಸಾಧ್ಯವಿಲ್ಲ. ಆದುದರಿಂದ ಅದನ್ನು ಪುನಶ್ಚೇತನ ನೀಡಲು ಒಂದು ಶಕ್ತಿಯ ಅವಶ್ಯಕತೆಯಿರುತ್ತದೆ. ಆದರೆ ಪವಿತ್ರ ಖುರ್‌ಆನ್ ಕೇವಲ ಈ ಎರಡು ಉದ್ದೇಶಗಳಿಗಾಗಿ ಅವತರಿಸಿಲ್ಲ. ಬದಲು ಅದು ಗತಿಸಿಹೋದ ವಾಸ್ತವ ಮತ್ತು ಸತ್ಯಗಳನ್ನು ಪೂರ್ಣಗೊಳಿಸಿದೆ. ಉದಾಹರಣೆಗೆ ತೌರಾತ್ ಅವಸ್ಥೆಗಳಿಗೆ ಅನುಗುಣವಾಗಿ ಖಸಾಸ್ ಕ್ಷಮೆ ನೀಡಲು ಒತ್ತು ಕೊಡುತ್ತದೆ. ಆದರೆ ಪವಿತ್ರ ಖುರ್‌ಆನ್ ಈ ಎರಡೂ ಸ್ಥಿತಿಗಳಲ್ಲಿ ಸಂದರ್ಭ ನೋಡಿ ನಿರ್ಣಯ ಕೈಗೊಳ್ಳಲು ತಿಳಿಸುತ್ತದೆ. ಹಾಗೆಯೇ ಪ್ರತಿಯೊಂದು ಅಧ್ಯಾಯದಲ್ಲಿ ತೌರಾತ್ ಮಂದಾಗಾಮಿ ವಹಿಸಿದೆ ಮತ್ತು ಇಂಜೀಲ್ ಹಿಂದೇಟು ಹಾಕಿದೆ. ಆದರೆ ಪವಿತ್ರ ಖುರ್‌ಆನ್ ಸಮತೋಲನವನ್ನು ಸಾಧಿಸಿದೆ. ಸಂದರ್ಭೋಚಿತ ಪರಿಸ್ಥಿತಿಗಳಲ್ಲಿ ತಿಳಿದು ನಿರ್ಣಯ ಕೈಗೊಳ್ಳಲು ಪ್ರೇರೇಪಿಸುತ್ತದೆ. ನೋಡಲಿಕ್ಕೆ ಮೂರು ಗ್ರಂಥಗಳ ಆಶ್ರಯ ಒಂದೇ ಆಗಿದೆ. ಆದರೆ ಒಬ್ಬರು ಹೆಚ್ಚು ಒತ್ತಡ ನೀಡುವವರಾದರೆ ಇನ್ನೊಬ್ಬರು ಇನ್ನೊಂದು ರೀತಿಯನ್ನು ಅನುಸರಿಸುವವರಾಗಿದ್ದಾರೆ. ಮತ್ತೊಬ್ಬರು ಮಾನವ ಪ್ರಕೃತಿಗೆ ಅನುಗುಣವಾಗಿ ಮಧ್ಯಸ್ಥಿಕೆಯ ಶಿಕ್ಷಣ ನೀಡುತ್ತದೆ. ಅದು ಪವಿತ್ರ ಖುರ್‌ಆನ್‌ನ ರೀತಿಯಾಗಿದೆ. ಹಾಗೆ ಸಂದರ್ಭ ಪರಿಸ್ಥಿತಿಯನ್ನು ಅವಲೋಕಿಸುವುದೇ ಜಾಣ್ಮೆಯ ಮಾತಾಗಿದೆ. ಆದುದರಿಂದ ಅದೇ ಜಾಣ್ಮೆಯ ಶಿಕ್ಷಣ ಪವಿತ್ರ ಖುರ್‌ಆನ್ ನೀಡುತ್ತದೆ. ತೌರಾತ್ ಒಂದು ನಿಷ್ಪ್ರಯೋಜಕ ಕಠಿಣ ನಿರ್ಧಾರದೆಡೆ ಎಳೆದರೆ, ಇಂಜೀಲ್ ಒಂದು ನಿಷ್ಪ್ರಯೋಜಕ ಕ್ಷಮೆಯೆಡೆ ಎಳೆಯುತ್ತದೆ. ಆದರೆ ಪವಿತ್ರ ಖುರಆನ್ ಸಂದರ್ಭ ಹಾಗೂ ಪರಿಸ್ಥಿತಿಗೆ ಅನುಗುನವಾಗಿ ನಿರ್ಣಯಿಸಲು ಹೇಳುತ್ತದೆ. ಹೀಗೆ ಮೂಳೆಯಲ್ಲಿ ಬಂದ ರಕ್ತ ಹಾಲಾಗಿ ಪರಿಣಮಿಸುತ್ತದೆ. ಅದೇ ರೀತಿ ತೌರಾತ್ ಮತ್ತು ಇಂಜೀಲಿನ ಆಜ್ಞೆಗಳು ಖುರ್‌ಆನ್‌ನಲ್ಲಿ ಬಂದು ಜಾಣ್ಮೆಯ ಶಿಕ್ಷಣವಾಗಿದೆ. ಪವಿತ್ರ ಖುರ್‌ಆನ್ ಅವತರಿಸಲಿಲ್ಲವಾಗಿದ್ದರೆ ತೌರಾತ್ ಮತ್ತು ಇಂಜೀಲ್ ಆ ಕುರುಡನ ಬಾಲದಂತಾಗುತ್ತಿದ್ದವು. ಅದು ಒಂದೊಮ್ಮೆ ಗುರಿ ಸಾಧಿಸಿದರೆ ನೂರು ಸಲ ಗುರಿ ತಪ್ಪುವಂತಾಗುತ್ತದೆ. ಅಂತೂ ಶರೀಅತ್ ಕಥನ ರೂಪದಲ್ಲಿ ತೌರಾತ್‌ನಿಂದ ಬಂದಿತು ಮತ್ತು ಉದಾಹರಣೆಗಳ ಹಾಗೆ ಇಂಜೀಲ್‌ನಿಂದ ಪ್ರಕಟವಾದವು ಮತ್ತು ಜಾಣ್ಮೆಯ ಶಿಕ್ಷಣ ರೂಪದಲ್ಲಿ ಪವಿತ್ರ ಖುರ್‌ಆನ್ ಸತ್ಯ ಹಾಗೂ ವಾಸ್ತವ ರೀತಿಯಲ್ಲಿ ಬಯಸುವವರಿಗೆ ದಕ್ಕಿತು. (ಸಿರಾಜುದ್ದೀನ್ ಈಸಾಯಿ ಕೇ ಚಾರ್ ಸವಾಲೊಂ ಕಾ ಜವಾಬ್, ರೂಹಾನಿ ಖಝಾಈನ್, ಸಂಪುಟ–12, ಪುಟ–359)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು ಯಾವಾಗ ನಾವುವು ಖುರ್‌ಆನ್‌ನ್ನು ಗಮನಕೊಟ್ಟು ನೋಡುತ್ತೀವೋ ಮತ್ತು ಸ್ವಚ್ಛ ಮನಸ್ಸಿನಿಂದ ಅದರ ಉದ್ದೇಶಗಳನ್ನು ತಿಳಿಯುತ್ತೇವೋ ಆಗ ನಮಗೆ ನಿಖರವಾಗಿ ಕಂಡುಬರುವುದೇನೆಂದರೆ ಖುರಆನ್ ತೌರಾತ್ ರೀತಿಯಲ್ಲಿ ಸೇಡು ತೀರಿಸಲು ಮತ್ತು ಕಠಿಣವಾಗಿ ವರ್ತಿಸಲು ಒತ್ತು ನೀಡುವುದಿಲ್ಲ. (ಉದಾಹರಣೆಗೆ ತೌರಾತ್ ಯುದ್ಧಗಳಿಂದ ಮತ್ತು ಖಸಾಸ್ ಕಾನೂನಿನಿಂದ ಸಾಬೀತಾಗುತ್ತದೆ.) ಮತ್ತು ಇಂಜೀಲಿನ ರೀತಿಯಲ್ಲಿ ಕ್ಷಮೆ ಮತ್ತು ತಾಳ್ಮೆಯ ಮಾತ್ರ ಶಿಕ್ಷಣ ಕೊಡುವ ಬದಲು ಪದೇ ಪದೇ ಹಿತವನ್ನು ಬಯಸುವುದು ಮತ್ತು ಅಹಿತವನ್ನು ಕಡೆಗಾಣಿಸಲು ಆಜ್ಞೆ ನೀಡುತ್ತದೆ. ಅಂದರೆ ಯಾವ ಆಜ್ಞೆ ಬುದ್ಧಿವಂತಿಕೆಯನ್ನು ಒಳಗೊಂಡಿದೆ ಮತ್ತು ಶರೀಅತ್ ಪ್ರಕಾರ ಒಳಿತಾಗಿದೆ ಮತ್ತು ಸಂದರ್ಭೋಚಿತವಾಗಿದೆ. ಅದನ್ನು ಪಾಲಿಸಿರಿ. ಯಾವುದರ ಮೇಲೆ ಬುದ್ಧಿ ಮತ್ತು ಕಾನೂನಿನ ಅಡಚಣೆಯಿದೆ ಮತ್ತು ಅಹಿತಕರವಾಗಿದೆ. ಅದರಿಂದ ದೂರವಿರಿ. ಹಾಗೆ ಖುರ್‌ಆನ್ ಅವಲೋಕಿಸಿದರೆ ಹಾಗೆಯೇ ನಾವು ಕಾಣುವೆವು, ಅದು ತನ್ನ ಕಾನೂನುಗಳನ್ನು ಮತ್ತು ಪರಿಮಿತಿಗಳನ್ನು ಮತ್ತು ಆಜ್ಞೆಗಳನ್ನು ಶಿಕ್ಷಣ ರೂಪದಲ್ಲಿ ನಮ್ಮ ಹೃದಯಗಳಲ್ಲಿ ಸ್ಥಾಪಿಸಬಯಸುತ್ತದೆ. ಏಕೆಂದರೆ ಆ ವ್ಯಕ್ತಿ ಆಜ್ಞೆ ಮತ್ತು ಅವಾಜ್ಞೆಯ ಸೆರೆಮನೆಯಲ್ಲಿ ನೂಕಬಯಸುವುದಿಲ್ಲ. ಬದಲು ತನ್ನ ಪವಿತ್ರ ಶರೀಅತ್‌ನ್ನು ಕಾನೂನುಬದ್ಧ ರೀತಿಯಲ್ಲಿ ವಿವರಿಸುತ್ತದೆ. ಉದಾಹರಣೆಗೆ ಅದೊಂದು ನಿರ್ಧಿಷ್ಟ ಆಜ್ಞೆಯ ನೆಲೆಯಲ್ಲಿ ಹೇಳುತ್ತದೆ. ನೀವು ಹಿತಕರವಾದುದನ್ನು ಪಾಲಿಸಿರಿ ಮತ್ತು ಅಹಿತಕರದಿಂದ ದೂರವಿರಿ. ಈ ಎರಡು ವಿಷಯಗಳು (ಅಂದರೆ ಮಅಶೂಫ್ ಮತ್ತು ಮುನ್‌ಕಿರ್) ಹಿತಕರವಾದುದು ಮತ್ತು ಅಹಿತಕರವಾದುದು ಎಂತಹ ಜಾಣ್ಮೆಭರಿತವಾಗಿವೆ. ಅಂದರೆ ಅದು ಶರೀಅತ್ತಿನ ಕಾನೂನುಗಳನ್ನು ಶೈಕ್ಷಣಿಕ ರೂಪದಲ್ಲಿ ಸೇರಿಸುತ್ತವೆ. ಈ ಶಿಕ್ಷಣದನ್ವಯ ಪ್ರತಿಯೊಂದು ಸಂದರ್ಭದಲ್ಲಿ ಯೋಚಿಸಬೇಕಾಗುತ್ತದೆ. ಯಥಾರ್ಥ ಪುಣ್ಯ ಕಾರ್ಯ ಯಾವುದಾಗಿದೆ ಎಂದು. ಉದಾಹರಣೆಗೆ ಒಬ್ಬನು ಈ ಸಮಯ ನಮ್ಮ ಒಂದು ಪಾಪಕಾರ್ಯ ಎಸಗಿದ್ದಾನೆ. ಈಗ ಅವನಿಗೆ ಹೊಡೆಯುವುದು ಉತ್ತಮವೋ ಅಥವಾ ಕ್ಷಮಿಸುವುದು ಉತ್ತಮವೋ ಯೋಚಿಸಬೇಕಾಗಿದೆ. ಒಬ್ಬ ಕೇಳುಗನು ಉದಾಹರಣೆಗೆ ಸಾವಿರ ರೂಪಾಯಿಗಳನ್ನು ತನ್ನ ಮಗನ ಮದುವೆ ವಿಜೃಂಭಣೆಯಿಂದ ಆಚರಿಸಲು ಪಟಾಕಿ ಹಾರಿಸಲು ಮತ್ತು ಹಾಡಿಗಾಗಿ ತನ್ನ ಕುಟುಂಬದ ಪದ್ಧತಿಯನ್ವಯ ಆಚರಿಸಬಯಸಲು ಸಾಲ ಪಡೆಯಬಯಸುತ್ತಾನೆ. ನಾವು ಅವನಿಗೆ ಸಾವಿರ ರೂಪಾಯಿಗಳನ್ನು ಕೊಡಬಹುದಾಗಿದೆ. ಆದರೆ ನಮಗೆ ಹಿತಕರ ಮತ್ತು ಅಹಿತಕರ ದೃಷ್ಟಿಯಿಂದ ಯೋಚಿಸಬೇಕಾಗುತ್ತದೆ. ದುಂದುವೆಚ್ಚಕ್ಕಾಗಿ ಕೇಳುವ ಆ ವ್ಯಕ್ತಿಯ ಬೇಡಿಕೆ ಸಮಂಜಸವೇ? ಅಂತೂ ಈ ರೀತಿ ಖುರ್‌ಆನ್ ನಮ್ಮ ಲೌಕಿಕ ಹಾಗೂ ಅಲೌಕಿಕ ಹಿತದೃಷ್ಟಿಗಾಗಿ ನಮ್ಮ ಪ್ರತಿಯೊಂದು ಹಿತಕರ ಕಾರ್ಯಗಳ ಸಂದರ್ಭ ಮತ್ತು ಅವಕಾಶವನ್ನು ಅವಲೋಕಿಸುವ ಪರಿಮಿತಿ ಹೊಂದಿದೆ. (ಅದೇ ಪುಟ 363).

### ತೌರಾತಿನ ಉದಾಹರಣೆ ಬಿರುಗಾಳಿ ಹಾಗೂ ಭೂಕಂಪನದಿಂದ ತತ್ತರಿಸಿದ ಅಪ್ರಮಾಣಿಕನ ಹಾಗಿದೆ. ಅದು ಇಟ್ಟಿಗೆಗಳ ಅಸ್ತವ್ಯಸ್ತ ರಾಶಿ ಆಗಿ ಹೋದನು. ಸಂಡಾಸಿನ ಇಟ್ಟಿಗೆಗಳು ಅಡುಗೆ ಮನೆಯಲ್ಲಿ ಮತ್ತು ಅಡುಗೆ ಮನೆಯ ಇಟ್ಟಿಗೆಗಳು ಸಂಡಾಸಿಗೆ ಹೋಗಿ ಸೇರಿದವು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಈ ಮಾತು ನೆನಪಿಡಲು ಯೋಗ್ಯವಾಗಿದೆ. ಖುರ್‌ಆನ್ ಮಾನವನ ಪರಿಪೂರ್ಣತೆಗೆ ಬೇಕಾದ ಎಲ್ಲಾ ಮಹಾನತೆಗಳನ್ನು ಒಳಗೊಂಡಿದೆ. ಇದರ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್(ಸ) ಹೇಳಿದರು: ಆಯುಧಗಳನ್ನು ಹಾಕಿದ ನಂತರ ಅದನ್ನು ಕೆಳಗಿಳಿಸುವುದು ಅಲ್ಲಾಹನ ಪ್ರವಾದಿಯ ವೈಭವಕ್ಕೆ ಸೇರಿದಲ್ಲ. ಅಲ್ಲಾಹನು ಇದಕ್ಕೆ ವಿರುದ್ಧವಾಗಿ ಏನಾದರೂ ತೀರ್ಮಾನ ಮಾಡುವುದರ ಹೊರತು. ಆದ್ದರಿಂದ ಈಗ ಅಲ್ಲಾಹನ ಹೆಸರು ಉಚ್ಚರಿಸುತ್ತಾ ಮುಂದಕ್ಕೆ ಧಾವಿಸಿರಿ. ನೀವು ಸಹನೆಯಿಂದ ವರ್ತಿಸಿದರೆ, ಖಂಡಿತವಾಗಿಯೂ ಅಲ್ಲಾಹನ ಸಹಾಯ ನಿಮ್ಮೊಂದಿಗೆ ಇರುವುದು ಎಂದು ದೃಢವಾಗಿ ನಂಬಿರಿ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಮದೀನ ತಲುಪಿದ ನಂತರ ಹಝ್ರತ್ ಪೈಗಂಬರ್(ಸ) ಮೊತ್ತಮೊದಲು ಮಸೀದಿ ನಿರ್ಮಾಣದ ಕಡೆಗೆ ಗಮನಹರಿಸಿದರು.**

**ಬದ್ರ್ ಯುದ್ಧಕ್ಕಾಗಿ ಹೊರಡುವುದಕ್ಕೆ ಮುಂಚಿತವಾಗಿ ಸಹಾಬಿಯರ ಬಳಿ 70 ಒಂಟೆಗಳಿದ್ದುವು. ಆದ್ದರಿಂದ ಒಂದೊಂದು ಒಂಟೆಯನ್ನು ಮೂರು ಮೂರು ವ್ಯಕ್ತಿಗಳಿಗಾಗಿ ನಿಶ್ಚಯಿಸಲಾಯಿತು. ಪ್ರತಿಯೊಬ್ಬರು ಸರದಿಯಂತೆ ಸವಾರರಾಗುತ್ತಿದ್ದರು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಒಂದು ಒಂಟೆಯಲ್ಲಿ ಸರದಿ ಪ್ರಕಾರ ಸವಾರರಾಗುತ್ತಿದ್ದರು.**

**ಹಝ್ರತ್ ಅಬೂಬಕರ್(ರ) ಶಾಮಿಯಾನದಲ್ಲಿ ತೆರೆದ ಖಡ್ಗದೊಂದಿಗೆ ಹಝ್ರತ್ ಪೈಗಂಬರರ(ಸ) ಸಂರಕ್ಷಣೆಗಾಗಿ ನಿಂತರು. ಹಝ್ರತ್ ಪೈಗಂಬರ್(ಸ) ರಾತ್ರಿ ಪೂರ್ತಿ ರೋದನದಿಂದ ದುಆ ಮಾಡಿದರು. ಪೂರ್ತಿ ಸೈನ್ಯದಲ್ಲಿ ಹಝ್ರತ್ ಪೈಗಂಬರ್(ಸ) ಮಾತ್ರ ರಾತ್ರಿ ಪೂರ್ತಿ ಎಚ್ಚರವಾಗಿದ್ದರು. ಉಳಿದೆಲ್ಲರೂ ತಮ್ಮ ತಮ್ಮ ಸರದಿಯಲ್ಲಿ ನಿದ್ದೆ ಮಾಡಿದರು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21-01-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

إِيَّاكَ نَعْبُدُ وَإِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಇತ್ತೀಚಿಗೆ ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ನಡೆಯುತ್ತಿದೆ. ಮದೀನ ತಲುಪಿದ ನಂತರ ಹಝ್ರತ್ ಪೈಗಂಬರ್(ಸ) ಮೊತ್ತಮೊದಲು ಮಸೀದಿ ನಿರ್ಮಾಣದ ಕಡೆಗೆ ಗಮನಹರಿಸಿದರು. ಈ ಬಗ್ಗೆ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ರೀತಿಯಾಗಿ ಬರೆದಿರುವರು:

ಮದೀನಕ್ಕೆ ಬಂದು ತಂಗಿದಾಗ ಹಝ್ರತ್ ಪೈಗಂಬರ್(ಸ) ಮಾಡಿದ ಮೊತ್ತಮೊದಲ ಕೆಲಸ ಮಸೀದಿ ನಬವಿಯ ನಿರ್ಮಾಣದ ಕಾರ್ಯವಾಗಿತ್ತು. ಹಝ್ರತ್ ಪೈಗಂಬರ್(ಸ)ರ ಒಂಟೆ ಬಂದು ಕುಳಿತಕೊಂಡ ಜಾಗವು ಸಹಲ್ ಮತ್ತು ಸುಹೈಲ್ ಎಂಬ ಇಬ್ಬರು ಮುಸ್ಲಿಮರದ್ದಾಗಿತ್ತು. ಆ ಭೂಸ್ವತ್ತು ಹಝ್ರತ್ ಅಸ್‌ಅದ್ ಬಿನ್ ಝುರಾರರ ಮೇಲ್ನೋಟದಲ್ಲಿ ಇರುತ್ತಿತ್ತು. ಅದು ಒಂದು ಬಂಜರು ಭೂಮಿಯಾಗಿತ್ತು. ಅದರ ಒಂದು ಭಾಗದಲ್ಲಿ ಅಲ್ಲಲ್ಲಿಯಾಗಿ ಖರ್ಜೂರದ ಮರಗಳಿದ್ದುವು. ಮತ್ತೊಂದು ಭಾಗದಲ್ಲಿ ಕೆಲವು ಹೊಂಡಗಳು ಇತ್ಯಾದಿಗಳಿದ್ದುವು. ಹಝ್ರತ್ ಪೈಗಂಬರ್(ಸ) ಅದನ್ನು ಮಸೀದಿ ಮತ್ತು ತನ್ನ ಕೊಠಡಿಗಳ ನಿರ್ಮಾಣಕ್ಕಾಗಿ ಇಷ್ಟಪಟ್ಟರು ಮತ್ತು ಆ ಕಾಲದಲ್ಲಿ 10 ದೀನಾರಿಗೆ ಆ ಭೂಪ್ರದೇಶವನ್ನು ಖರೀದಿ ಮಾಡಿದರು. ಜಾಗವನ್ನು ಸಮತಟ್ಟುಗೊಳಿಸಿ ಮರಗಳನ್ನು ಕಡಿದು ಮಸ್ಜಿದ್ ನಬವಿಯ ನಿರ್ಮಾಣ ಶುರುವಾಯಿತು. ಹಝ್ರತ್ ಪೈಗಂಬರ್(ಸ) ಸ್ವತಃ ದುಆ ಮಾಡಿ ಅಡಿಗಲ್ಲನ್ನು ಇರಿಸಿದರು. ಖುಬಾದ ಮಸೀದಿಯ ನಿರ್ಮಾಣದ ವೇಳೆ ನಡೆದಂತೆ ಸಹಾಬರೇ ಕಟ್ಟಡ ನಿರ್ಮಾಣ ಮತ್ತು ಕಾರ್ಮಿಕರ ಕೆಲಸಗಳನ್ನು ಮಾಡಿದರು. ಅದರಲ್ಲಿ ಕೆಲವೊಮ್ಮೆ ಹಝ್ರತ್ ಪೈಗಂಬರ್(ಸ) ಸ್ವತಃ ಭಾಗಿಯಾಗುತ್ತಿದ್ದರು.

(ಸೀರತ್ ಖಾತುಮುನ್ನಬೀಈನ್, ಪುಟ-269)

ಪ್ರಸ್ತಾಪಿಸಲಾದಂತೆ ಮಸೀದಿ ಮತ್ತು ಕೊಠಡಿಗಳಿಗಾಗಿ ಆ ಜಾಗವನ್ನು ಹಝ್ರತ್ ಪೈಗಂಬರ್(ಸ) 10 ದೀನಾರಿಗೆ ಖರೀದಿ ಮಾಡಿದ್ದರು ಮತ್ತು ಹಝ್ರತ್ ಅಬೂಬಕರ್(ರ)ರ ಹಣದಿಂದ ಅದನ್ನು ಖರೀದಿ ಮಾಡಲಾಯಿತು ಎಂದು ವರದಿಗಳಲ್ಲಿ ಬಂದಿದೆ.

(ಅಲ್‌ಮವಾಹಿಬ್ ಲಿದ್ದುನಿಯ, ಸಂಪುಟ-1, ಪುಟ-316, ಅಲ್‌ಕುತುಬ್ ಇಲಸ್ಲಾಮಿ 2004)

ಮಸೀದಿ ನಿರ್ಮಾಣದ ಬಗ್ಗೆ ಹೆಚ್ಚಿನ ವಿವರ ಹೀಗೆ ಲಭಿಸುತ್ತದೆ: ನಿರ್ಮಾಣ ಶುರುವಾಗುವಾಗ ಹಝ್ರತ್ ಪೈಗಂಬರ್(ಸ) ತನ್ನ ಅನುಗ್ರಹೀತ ಕೈಗಳಿಂದ ಒಂದು ಇಟ್ಟಿಗೆಯನ್ನು ಇರಿಸಿದರು. ಅನಂತರ ಹಝ್ರತ್ ಅಬೂಬಕರ್(ರ)ರನ್ನು ಕರೆದಾಗ ಅವರು ಹಝ್ರತ್ ಪೈಗಂಬರ್(ಸ) ಇರಿಸಿದ ಇಟ್ಟಿಗೆಯೊಂದಿಗೆ ಮತ್ತೊಂದು ಇಟ್ಟಿಗೆಯನ್ನು ಇರಿಸಿದರು. ಅನಂತರ ಹಝ್ರತ್ ಉಮರ್(ರ)ರನ್ನು ಕರೆಯಲಾಯಿತು. ಅವರು ಹಝ್ರತ್ ಅಬೂಬಕರ್(ರ) ಇರಿಸಿದ ಇಟ್ಟಿಗೆಯ ಬಳಿ ಒಂದು ಇಟ್ಟಿಗೆಯನ್ನು ಇರಿಸಿದರು. ಅನಂತರ ಹಝ್ರತ್ ಉಸ್ಮಾನ್(ರ) ಬಂದರು. ಅವರು ಹಝ್ರತ್ ಉಮರ್(ರ)ರ ಇಟ್ಟಿಗೆ ಸಮೀಪ ಬೇರೊಂದು ಇಟ್ಟಿಗೆಯನ್ನು ಇರಿಸಿದರು. (ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-90, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಮಸೀದಿ ನಿರ್ಮಾಣ ಮಾಡಿದಾಗ ಅವರು ಅದರ ಬುನಾದಿಯಾಗಿ ಒಂದು ಕಲ್ಲನ್ನು ಇರಿಸಿದರು ಮತ್ತು ಹಝ್ರತ್ ಅಬೂಬಕರ್(ರ)ರೊಡನೆ ಹೀಗೆ ಹೇಳಿದರು: ನನ್ನ ಕಲ್ಲಿನ ಜೊತೆಗೆ ನಿಮ್ಮ ಕಲ್ಲನ್ನು ಇರಿಸಿರಿ. ಅನಂತರ ಹಝ್ರತ್ ಉಮರ್(ರ)ರೊಡನೆ ಹೇಳಿದರು: ನಿಮ್ಮ ಕಲ್ಲನ್ನು ಅಬೂಬಕರ್‌ರ ಕಲ್ಲಿನ ಸಮೀಪ ಇರಿಸಿರಿ. ಅನಂತರ ಹಝ್ರತ್ ಉಸ್ಮಾನ್(ರ)ರೊಡನೆ ಹೇಳಿದರು: ನಿಮ್ಮ ಕಲ್ಲನ್ನು ಉಮರ್‌ರ ಕಲ್ಲಿನ ಜೊತೆಗೆ ಇರಿಸಿರಿ. (ಜುಸ್ತುಜೂ ಎ ಮದೀನ, ಪುಟ-446, ಓರಿಎಂಟಲ್ ಪಬ್ಲಿಕೇಷನ್ ಪಾಕಿಸ್ತಾನ್)

ಹಿಜರೀ 7 ಮುಹರ್ರಮ್‌ನಲ್ಲಿ ಹಝ್ರತ್ ಪೈಗಂಬರ್(ಸ) ಖೈಬರ್ ಯುದ್ಧದಿಂದ ವಿಜಯಿಯಾಗಿ ಮರಳಿದಾಗ ಮಸ್ಜಿದ್ ನಬವಿಯ ವಿಸ್ತರಣೆ ಮತ್ತು ಪುನರ್ನಿರ್ಮಾಣದ ಆಜ್ಞೆಯನ್ನು ನೀಡಿದರು. ಈ ಬಾರಿಯೂ ಹಝ್ರತ್ ಪೈಗಂಬರ್(ಸ) ಸಹಾಬಿರಯೊಡನೆ ಜೊತೆ ಸೇರಿ ಮಸೀದಿ ನಿರ್ಮಾಣದಲ್ಲಿ ಭಾಗಿಯಾದರು.

ಉಬೈದುಲ್ಲಾಹ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಮನೆಗಳಿಗಾಗಿ ತುಂಡುಭೂಮಿಗಳನ್ನು ಕೊಡುತ್ತಿದ್ದಾಗ ಹಝ್ರತ್ ಅಬೂಬಕರ್(ರ)ರಿಗೆ ಅವರ ಮನೆಗಾಗಿ ಮಸೀದಿಯ ಸಮೀಪದ ಜಾಗವನ್ನು ನಿಶ್ಚಯಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಪುಟ-93, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ಅಬೂಬಕರ್(ರ)ರ ಸಾಹೋದರ್ಯ ಸ್ಥಾಪನೆಯ ಬಗ್ಗೆ ವರದಿಗಳಿವೆ. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಖಾರಿಜ ಬಿನ್ ಝೈದ್(ರ) ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. (ಅಲ್‌ಅಸಾಬ

ಫೀ ಮಳ್‌ರಿಫತಿಸ್ಸಹಾಬ, ಸಂಪುಟ-2, ಪುಟ-190, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು ಎಂದು ಒಂದು ವರದಿಯಲ್ಲಿ ಬಂದಿದೆ.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-93, ದಾರ್ ಅಹ್ಯಾಉತ್ತುರಾಸಲ್ ಅರಬಿ ಬೈರೂತ್ 1996)

ಹಝ್ರತ್ ಉಮರ್(ರ)ರೊಡನೆ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದು ಮಕ್ಕದಲ್ಲಾಗಿತ್ತು ಎಂದು ವರದಿಯಲ್ಲಿ ಬಂದಿದೆ. ಉದಾಹರಣೆಗೆ ಅಲ್ಲಾಮ ಅಸಾಕರ್ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮತ್ತು ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರ ನಡುವೆ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಅನಂತರ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಹೋದಾಗ, ಎರಡು ಸಾಹೋದರ್ಯ ಸಂಬಂಧಗಳನ್ನು ಹೊರತುಪಡಿಸಿ ಉಳಿದ ಸಾಹೋದರ್ಯ ಸಂಬಂಧಗಳನ್ನು ರದ್ದುಗೊಳಿಸಿದರು. ಆ ಎರಡು ಸಂಬಂಧಗಳಲ್ಲಿ ಒಂದು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಲಿ(ರ)ರ ನಡುವೆ ಇದ್ದದ್ದು. ಮತ್ತೊಂದು ಹಝ್ರತ್ ಹಂಝ ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ)ರ ನಡುವೆ ಇದ್ದದ್ದು.
(ತಾರೀಖ್ ದಮಿಷ್ಕ್ ಅಲ್‌ಕಬೀರ್ ಲಿಇಬ್ನೆ ಅಸಾಕರ್, ಸಂಪುಟ-16, ಭಾಗ-32, ಪುಟ-63, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2001)

ಸಾಹೋದರ್ಯ ಸಂಬಂಧ ಸ್ಥಾಪನೆ ಯಾವಾಗ ನಡೆದಿತ್ತು ಎಂಬುದರ ಬಗ್ಗೆ ಚರಿತ್ರೆಯಲ್ಲಿ ಹೀಗೆ ಪ್ರಸ್ತಾಪ ಬಂದಿದೆ: ಸಾಹೋದರ್ಯ ಸಂಬಂಧ ಸ್ಥಾಪನೆ ಎರಡು ಬಾರಿ ನಡೆದಿದ್ದುವು. ಇದರ ಬಗ್ಗೆ ಸಹೀಹ್ ಬುಖಾರಿಯ ವ್ಯಾಖ್ಯಾನಗಾರ ಅಲ್ಲಾಮ ಖಿಸ್ತಲಾನಿ ವರದಿ ಮಾಡುತ್ತಾರೆ: ಸಾಹೋದರ್ಯ ಸಂಬಂಧ ಸ್ಥಾಪನೆ ಎರಡು ಬಾರಿ ನಡೆದಿದ್ದುವು. ಮೊದಲ ಬಾರಿ ಹಿಜ್ರತಿಗೆ ಮುಂಚೆ ಮಕ್ಕದಲ್ಲಿ ಮುಸ್ಲಿಮರ ನಡುವೆ ನಡೆದಿತ್ತು. ಹಝ್ರತ್ ಪೈಗಂಬರ್(ಸ) ಅದನ್ನು ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ನಡುವೆ, ಹಝ್ರತ್ ಹಂಝ ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ) ನಡುವೆ, ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನಡುವೆ, ಹಝ್ರತ್ ಝುಬೇರ್ ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ನಡುವೆ ಹಾಗೂ ಹಝ್ರತ್ ಅಲಿ(ರ) ಮತ್ತು ಸ್ವತಃ ಹಝ್ರತ್ ಪೈಗಂಬರ್(ಸ)ರ ನಡುವೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಹೋದಾಗ ಮುಹಾಜಿರರು ಮತ್ತು ಅನ್ಸಾರರ ನಡುವೆ ಹಝ್ರತ್ ಅನಸ್ ಬಿನ್ ಮಾಲಿಕ್(ರ)ರ ಮನೆಯಲ್ಲಿ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದರು. ಇಬ್ನು ಮಸ್‌ಊದ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನೂರು ಸಹಾಬಿಯರ ನಡುವೆ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದರು. ಎಂದರೆ, ಐವತ್ತು ಮುಹಾಜಿರರ ಮತ್ತು ಐವತ್ತು ಅನ್ಸಾರರ ನಡುವೆ.
(ಇರ್‌ಶಾದ್ ಅಸ್ಸಾರಿ, ಶರಹ್ ಸಹೀಹ್ ಬುಖಾರಿ, ಭಾಗ-7, ಪುಟ-133, ಹದೀಸ್-3937, ದಾರುಲ್ ಫಿಕರ್ 2010)

ಬದ್ರ್ ಯುದ್ಧ ಮತ್ತು ಹಝ್ರತ್ ಅಬೂಬಕರ್(ರ): ಬದ್ರ್ ಯುದ್ಧ ಹಿಜರಿ 2 ರಮಝಾನ್ ತಿಂಗಳಲ್ಲಿ, ಎಂದರೆ ಕ್ರಿಸ್ತಶಕ 623 ಮಾರ್ಚಿನಲ್ಲಿ ನಡೆದಿತ್ತು ಎಂದು ಪ್ರಸ್ತಾಪಿಸಲಾಗಿದೆ. (ಸೀರ'ತ್ ಖಾತಮನ್ನಬೀಈನ್, ಪುಟ-349)

ಬದ್ರ್ ಯುದ್ಧಕ್ಕಾಗಿ ಹೊರಡುವುದಕ್ಕೆ ಮುಂಚಿತವಾಗಿ ಸಹಾಬಿಯರ ಬಳಿ 70 ಒಂಟೆಗಳಿದ್ದುವು. ಆದ್ದರಿಂದ ಒಂದೊಂದು ಒಂಟೆಯನ್ನು ಮೂರು ಮೂರು ವ್ಯಕ್ತಿಗಳಿಗಾಗಿ ನಿಶ್ಚಯಿಸಲಾಯಿತು. ಪ್ರತಿಯೊಬ್ಬರು ಸರದಿಯಂತೆ ಸವಾರರಾಗುತ್ತಿದ್ದರು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಒಂದು ಒಂಟೆಯಲ್ಲಿ ಸರದಿ ಪ್ರಕಾರ ಸವಾರರಾಗುತ್ತಿದ್ದರು.
(ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-204, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಪೈಗಂಬರ್(ಸ) ಬದ್ರಿಗಾಗಿ ರವಾನೆಯಾದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಸಿರಿಯದ ಕಡೆಗೆ ಬರುತ್ತಿದ್ದ ಅಬೂಸುಫ್‌ಯಾನಿನ ವ್ಯಾಪಾರಿ ತಂಡವನ್ನು ತಡೆಯಲಿಕ್ಕಾಗಿ ಮದೀನದಿಂದ ಹೊರಟರು. ಮುಸ್ಲಿಮರ ಯಾತ್ರಾ ತಂಡವು ಮದೀನದ ಪರಿಸರದಲ್ಲಿ ಸಫ್ರಾ ಕಣಿವೆಯ ಸಮೀಪವಿರುವ ಝಫ್‌ರಾನಿನ ಕಣಿವೆಯಲ್ಲಿ ತಲುಪಿದಾಗ, ಖುರೈಶಿಗಳು ತಮ್ಮ ವ್ಯಾಪಾರಿ ತಂಡವನ್ನು ರಕ್ಷಿಸಲಿಕ್ಕಾಗಿ ಹೊರಟಿದ್ದಾರೆ ಎಂಬ ಮಾಹಿತಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಸಲಹೆ ಕೇಳುತ್ತಾ ಹೀಗೆ ಹೇಳಿದರು: ಮಕ್ಕದಿಂದ ಒಂದು ಸೈನ್ಯ ಅತ್ಯಂತ ವೇಗವಾಗಿ ಹೊರಟಿದೆ. ಈ ಕುರಿತು ನೀವು ಏನು ಹೇಳುತ್ತೀರಿ? ಸೈನ್ಯವನ್ನು ಎದುರಿಸುವುದಕ್ಕಿಂತ ನಿಮಗೆ ವ್ಯಾಪಾರಿ ತಂಡ ಹೆಚ್ಚು ಪ್ರಿಯವೇ? ಅವರು ಹೇಳಿದರು: ಯಾಕಿಲ್ಲ? ನಾವು ಶತ್ರುಗಳನ್ನು ಎದುರಿಸುವುದಕ್ಕಿಂತ ವ್ಯಾಪಾರಿ ತಂಡವನ್ನು ಭೇಟಿಯಾಗುವುದನ್ನು ಹೆಚ್ಚು ಇಷ್ಟಪಡುತ್ತೇವೆ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಒಂದು ಸಂಘ ಹೇಳಿತು – ನೀವು ನಮ್ಮೊಡನೆ ಯುದ್ಧದ ಬಗ್ಗೆ ಯಾಕೆ ಹೇಳಿಲ್ಲ? ಹೇಳಿದ್ದರೆ, ನಾವು ಅದರ ತಯಾರಿ ಮಾಡುತ್ತಿದ್ದೆವು. ನಾವಂತು ವ್ಯಾಪಾರಿ ತಂಡಕ್ಕಾಗಿ ಹೊರಟಿದ್ದೆವು. ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ: ಅವರು ಹೇಳಿದರು: ಹೇ ಅಲ್ಲಾಹನ ಪ್ರವಾದಿ, ನೀವು ವ್ಯಾಪಾರಿ ತಂಡದ ಕಡೆಗೇನೇ ಹೋಗಬೇಕು ಮತ್ತು ಶತ್ರುಗಳನ್ನು ಬಿಟ್ಟುಬಿಡಬೇಕು. ಇದನ್ನು ಕೇಳಿ ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಮುಖದ ಬಣ್ಣ ಬದಲಾಯಿತು. ಹಝ್ರತ್ ಅಬೂ ಅಯ್ಯೂಬ್(ರ) ವರದಿ ಮಾಡುತ್ತಾರೆ: **ಕಮಾ ಅಖ್ರಜಕ ರಬ್ಬುಕ ಮಿಮ್ ಬೈತಿಕ ಬಿಲ್ ಹಖ್ಖಿ, ವ ಇನ್ನ ಫರೀಖಮ್ಮಿನಲ್‌ಮುಮಿನೀನ ಲಕಾರಿಹೂನ್**. ಎಂದರೆ, "ಸತ್ಯವಿಶ್ವಾಸಿಗಳಲ್ಲಿ ಒಂದು ಗುಂಪು ಇಷ್ಟಪಡುತ್ತಿರಲಿಲ್ಲವಾದರೂ ನಿನ್ನ ಪ್ರಭು ನಿನ್ನನ್ನು ಒಂದು ಮಹತ್ತರ ಉದ್ದೇಶಕ್ಕೋಸ್ಕರ ನಿನ್ನ ಮನೆಯಿಂದ ಹೊರಗೆ ತಂದ ಕಾರಣವಾಗಿ" ಎಂಬ ಈ ವಚನದ ಅವತೀರ್ಣದ ಕಾರಣವೇ ಈ ಘಟನೆಯಾಗಿದೆ. ಹೇಗಿದ್ದರೂ ಹಝ್ರತ್ ಅಬೂಬಕರ್(ರ) ನಿಂತು ಬಹಳ ಉತ್ತಮವಾಗಿ ಮಾತನಾಡಿದರು. ಅನಂತರ ಹಝ್ರತ್ ಉಮರ್(ರ) ಎದ್ದುನಿಂತು ಬಹಳ ಉತ್ತಮವಾಗಿ ಮಾತನಾಡಿದರು. ಅನಂತರ ಹಝ್ರತ್ ಮಿಖ್‌ದಾದ್ ಎದ್ದು ನಿಂತರು ಮತ್ತು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮೊಡನೆ ಅಲ್ಲಾಹನು ಆಜ್ಞಾಪಿಸಿರುವುದರ ಕಡೆಗೆ ನೀವು ಹೋಗಿರಿ. ನಾವು ನಿಮ್ಮೊಂದಿಗಿದ್ದೇವೆ. ಅಲ್ಲಾಹನಾಣೆ, **ಫಝ್‌ಹಬ್ ಅಂತ ವ ರಬ್ಬುಕ ಫಖಾತಿಲಾ ಇನ್ನಾ ಹಾಹುನಾ ಖಾಇದೂನ್** ಎಂದು ಬನೀ ಇಸ್ರಾಈಲರು ಮೂಸಾ(ಅ)ರೊಡನೆ ಹೇಳಿದ ಹಾಗೆ ನಾವು ಹೇಳುವುದಿಲ್ಲ, ಎಂದರೆ, ನೀನು ಮತ್ತು ನಿನ್ನ ಪ್ರಭು ಹೋಗಿ ಅವರೊಡನೆ ಯುದ್ಧ ಮಾಡಿರಿ. ನಾವಿಲ್ಲಿ ಕುಳಿತುಕೊಳ್ಳುತ್ತೇವೆ.' ಎಂದು ನಾವು ಹೇಳುವುದಿಲ್ಲ. ನಮಗೆ ಜೀವವಿರುವ ವರೆಗೂ ನಾವು ನಿಮ್ಮೊಂದಿಗೆ ಸೇರಿಕೊಂಡು ಯುದ್ಧ ಮಾಡುವೆವು. ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನಾಣೆ, ನೀವು ನಮ್ಮನ್ನು ಬರ್ಕುಲ್ಗಿಮಾದಿಗೆ ಕೂಡ ಕರೆದುಕೊಂಡು ಹೋದರೂ ನಾವು ನಿಮ್ಮ ಜೊತೆಗೆ ಖಡ್ಗಗಳೊಂದಿಗೆ ಸೆಣಸಾಡುತ್ತಾ ಅಲ್ಲಿಗೆ ತಲುಪುವ ವರೆಗೂ ನಿಮ್ಮೊಂದಿಗೆ ನಡೆಯುವೆವು.

ಬರ್ಕುಲ್ಗಿಮಾದ್ ಎಂಬುದು ಮಕ್ಕದಿಂದ ಐದು ದಿನಗಳ ಯಾತ್ರೆ ಮಾಡಬೇಕಾದಷ್ಟು ದೂರವಿರುವ ಒಂದು ಪಟ್ಟಣವಾಗಿದೆ. ಅದು ಸಮುದ್ರದ ಸಮೀಪವಿದೆ. ಹೇಗಿದ್ದರೂ ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ವರದಿ ಮಾಡುತ್ತಾರೆ: ಇದನ್ನು ಕೇಳಿ ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಮುಖ ಬೆಳಗುತ್ತಿರುವುದನ್ನು ನಾನು ಕಂಡೆನು. ಅವರು ಈ ಮಾತಿನಿಂದ ಬಹಳ ಸಂತೋಷಗೊಂಡರು. (ಅಸ್ಸೀರ'ತ್'ುಲ್ ಹಲಬೀಯ, ಮಗಾಝೀಯ, ಸಂಪುಟ-2, ಪುಟ-205-206, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಮುಜಮುಲ್ ಬಲದಾನ್, ಸಂಪುಟ-1, ಪುಟ-475, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಅನಂತರ ಹಝ್ರತ್ ಪೈಗಂಬರ್(ಸ) ಝಫ್‌ರಾನ್‌ನಿಂದ ರವಾನೆಯಾದರು ಮತ್ತು ಬದ್ರಿನ ಸಮೀಪ ತಂಗಿದರು. ಅನಂತರ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರಲ್ಲಿ ಒಬ್ಬ ವ್ಯಕ್ತಿ ಸವಾರರಾದರು. ಇಬ್ನು ಹಿಶಾಮಿನ ಪ್ರಕಾರ ಅವರು ಹಝ್ರತ್ ಅಬೂಬಕರ್(ರ) ಆಗಿದ್ದರು. ಮತ್ತೊಂದು ವರದಿ ಪ್ರಕಾರ ಹಝ್ರತ್ ಅಬೂಬಕರ್‌ರ(ರ) ಬದಲಾಗಿ ಹಝ್ರತ್ ಖತಾದ ಬಿನ್ ನೂಮಾನ್ ಅಥವಾ ಹಝ್ರತ್ ಮುಅಧ್ ಬಿನ್ ಜಬಲ್(ರ) ಆಗಿದ್ದರು. ಹೇಗಿದ್ದರೂ ಹಝ್ರತ್ ಪೈಗಂಬರ್(ಸ) ಅರೇಬಿಯದ ಒಬ್ಬ ವೃದ್ಧ ವ್ಯಕ್ತಿಯ ಬಳಿ ನಿಂತರು. ಅವರೊಡನೆ ಖುರೈಶಿಯರ ಕುರಿತು ಮತ್ತು ಅವರ ಸಹಚರರ ಕುರಿತು ಕೇಳಿದರು.
(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ಪುಟ-421, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-207, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಬದ್ರ್ ಮೈದಾನದಲ್ಲಿ ಮುಸ್ಲಿಮರು ಒಟ್ಟುಗೂಡಿದಾಗ ಹಝ್ರತ್ ಪೈಗಂಬರ್(ಸ)ರಿಗಾಗಿ ಒಂದು ಡೇರೆಯನ್ನು ತಯಾರಿಸಲಾಯಿತು. ಅದರ ತಯಾರಿಕೆಯ ಕುರಿತು ಹೀಗೆ ಬರೆಯಲಾಗಿದೆ: ಔಸ್‌ನ ಸರದಾರ ಸಅದ್ ಬಿನ್ ಮುಅಧ್‌ರ ಸಲಹೆಯಿಂದ ಸಹಾಬಿಯರು ಮೈದಾನದ ಒಂದು ಭಾಗದಲ್ಲಿ ಹಝ್ರತ್ ಪೈಗಂಬರ್(ಸ)ರಿಗಾಗಿ ಒಂದು ಶಾಮಿಯಾನವನ್ನು

ತಯಾರು ಮಾಡಿದರು. ಹಝ್ರತ್ ಪೈಗಂಬರ್(ಸ)ರ ಸವಾರಿಯನ್ನು ಸಅದ್(ರ) ಶಾಮಿಯಾನದ ಸಮೀಪ ಕಟ್ಟಿ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವು ಈ ಚಪ್ಪರದಲ್ಲಿ ತಂಗಿರಿ ಮತ್ತು ನಾವು ಅಲ್ಲಾಹನ ಹೆಸರನ್ನು ಉಚ್ಚರಿಸುತ್ತಾ ಶತ್ರುಗಳನ್ನು ಎದುರಿಸುವೆವು. ಸಅದ್ ಮತ್ತಿತರ ಅನ್ಸಾರ್‌ಗಳು ಹಝ್ರತ್ ಪೈಗಂಬರ್(ಸ)ರ ಸುತ್ತ ಕಾವಲು ನಿಲ್ಲಲು ತಯಾರಾದರು. ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ) ಅದೇ ಶಾಮಿಯಾನದಲ್ಲಿ ರಾತ್ರಿ ಕಳೆದರು. ಹಝ್ರತ್ ಅಬೂಬಕರ್(ರ) ಶಾಮಿಯಾನದಲ್ಲಿ ತೆರೆದ ಖಡ್ಗದೊಂದಿಗೆ ಹಝ್ರತ್ ಪೈಗಂಬರರ(ಸ) ಸಂರಕ್ಷಣೆಗಾಗಿ ನಿಂತರು. ಹಝ್ರತ್ ಪೈಗಂಬರ್(ಸ) ರಾತ್ರಿ ಪೂರ್ತಿ ರೋದನದಿಂದ ದುಆ ಮಾಡಿದರು. ಪೂರ್ತಿ ಸೈನ್ಯದಲ್ಲಿ ಹಝ್ರತ್ ಪೈಗಂಬರ್(ಸ) ಮಾತ್ರ ರಾತ್ರಿ ಪೂರ್ತಿ ಎಚ್ಚರವಾಗಿದ್ದರು. ಉಳಿದೆಲ್ಲರೂ ತಮ್ಮ ತಮ್ಮ ಸರದಿಯಲ್ಲಿ ನದ್ದೆ ಮಾಡಿದರು.
(ಸೀರತ್ ಖಾತಮನ್ನಬೀಈನ್, ಪುಟ–357) (ಸಬ್ಲುಲ್ ಹುದಾ, ಸಂಪುಟ–11, ಪುಟ–398, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಅಬೂಬಕರ್(ರ)ರ ಶೌರ್ಯದ ಬಗ್ಗೆ ಹಝ್ರತ್ ಅಲಿ(ರ)ರಿಂದ ಒಂದು ವರದಿಯಿದೆ. ಹಝ್ರತ್ ಅಲಿ(ರ) ಸಹಾಬರ ಒಂದು ಗುಂಪುನೊಂದಿಗೆ ಹೀಗೆ ಕೇಳಿದರು: ಜನರಲ್ಲಿ ಎಲ್ಲರಿಗಿಂತ ಹೆಚ್ಚು ಶೂರರಾದ ವ್ಯಕ್ತಿ ಯಾರೆಂದು ನನ್ನೊಡನೆ ಹೇಳಿರಿ. ನೀವೇ ಎಂದು ಜನರು ಹೇಳಿದರು. ಹಝ್ರತ್ ಅಲಿ(ರ) ಹೇಳಿದರು: ಜನರಲ್ಲಿ ಅತ್ಯಂತ ಶೂರ ಹಝ್ರತ್ ಅಬೂಬಕರ್(ರ) ಆಗಿರುವರು. ಬದ್ರಿನ ದಿನದಂದು ನಾವು ಹಝ್ರತ್ ಪೈಗಂಬರ್(ಸ)ರಿಗಾಗಿ ಶಾಮಿಯಾನವನ್ನು ತಯಾರಿಸಿದೆವು. ಮುಶ್ರಿಕರು ಹಝ್ರತ್ ಪೈಗಂಬರ್(ಸ)ರ ಸಮೀಪ ತಲುಪದಿರಲಿಕ್ಕಾಗಿ ಯಾರು ಹಝ್ರತ್ ಪೈಗಂಬರ್(ಸ)ರೊಡನೆ ಇರುವರು? ಎಂದು ಕೇಳಲಾಯಿತು. ಅಲ್ಲಾಹನಾಣೆ, ನಮ್ಮಲ್ಲಿ ಯಾರೂ ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ಹೋಗಲಿಲ್ಲ. ಆದರೆ ಯಾವನೇ ಮುಶ್ರಿಕನು ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ತಲುಪುವುದಕ್ಕೆ ಮುಂಚೆ ಹಝ್ರತ್ ಅಬೂಬಕರ್(ರ)ರನ್ನು ಎದುರಿಸಬೇಕಾಗಿ ಬರುವ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ಖಡ್ಗವನ್ನು ಎತ್ತಿ ಹಝ್ರತ್ ಪೈಗಂಬರ್(ಸ)ರ ತಲೆಯ ಬಳಿ ನಿಂತರು. (ಅಸ್ಸೀರ'ತ'ುಲ್ ಹಲಬೀಯ, ಸಂಪುಟ–2, ಪುಟ–214, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಈ ಸಂಬಂಧವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿ(ರ) ಒಂದು ಬಾರಿ ಹೇಳಿದರು: ಸಹಾಬಿಯರಲ್ಲಿ ಅತ್ಯಂತ ಶೂರ ಮತ್ತು ಧೈರ್ಯಶಾಲಿ ಹಝ್ರತ್ ಅಬೂಬಕರ್(ರ) ಆಗಿದ್ದರು. ಬದ್ರ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ)ರಿಗಾಗಿ ಒಂದು ಬೇರೆ ಚಪ್ಪರವನ್ನು ತಯಾರಿಸಲಾಗಿತ್ತು. ಇಂದು ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯ ಕೆಲಸ ಯಾರಿಗೆ ಒಪ್ಪಿಸುವುದು ಎಂಬ ಪ್ರಶ್ನೆ ಎದ್ದಿತು. ಆಗ ಹಝ್ರತ್ ಅಬೂಬಕರ್(ರ) ತಕ್ಷಣ ತೆರೆದ ಖಡ್ಗವನ್ನು ಎತ್ತಿ ನಿಂತರು. ಅವರು ಅತ್ಯಂತ ಅಪಾಯಕರ ಸಂದರ್ಭದಲ್ಲಿ ಅತ್ಯಂತ ಧೈರ್ಯದಿಂದ ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯ ಕರ್ತವ್ಯವನ್ನು ನೆರವೇರಿಸಿದರು. (ತಫ್ಸೀರೆ ಕಬೀರ್, ಸಂಪುಟ–7, ಪುಟ–364–365)

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಬದ್ರ್ ಯುದ್ಧದಂದು ಹಝ್ರತ್ ಪೈಗಂಬರ್(ಸ) ಒಂದು ದೊಡ್ಡ ಡೇರೆಯಲ್ಲಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: **ಅಲ್ಲಾಹುಮ್ಮ ಇನ್ನೀ ಇನ್‌ಶದ್ದುಖ ಅಹ್‌ದಿಕ, ವವಅ್‌ದಿಕ ಅಲ್ಲಾಹುಮ್ಮ ಇನ್‌ಶಿಲ್‌ತ ಲಮ್‌ತಅ್‌ಬುದ್ ಬಅ್‌ದಲ್‌ಯೌಮ್**. ಎಂದರೆ, ಹೇ ನನ್ನ ಅಲ್ಲಾಹ್, ನಾನು ನಿನ್ನದೇ ಒಡಂಬಡಿಕೆ ಮತ್ತು ನಿನ್ನದೇ ವಾಗ್ದಾನದ ಆಣೆ ಹಾಕಿ ಹೇಳುತ್ತೇನೆ. ಹೇ ನನ್ನ ಪ್ರಭೂ, ನೀನೇ ಮುಸ್ಲಿಮರ ನಾಶವನ್ನು ಬಯಸುವನಾದರೆ, ಇಂದಿನ ನಂತರ ನಿನ್ನನ್ನು ಆರಾಧಿಸುವವರು ಯಾರೂ ಇರಲಾರರು. ಅಷ್ಟರಲ್ಲಿ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಕೈಯನ್ನು ಹಿಡಿದರು ಮತ್ತು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಿಲ್ಲಿಸಿರಿ, ನೀವು ನಿಮ್ಮ ಪ್ರಭುವಿನೊಂದಿಗೆ ಬಹಳವಾಗಿ ಮತ್ತು ಒತ್ತುಕೊಟ್ಟು ದುಆ ಮಾಡಿದ್ದೀರಿ. ಹಝ್ರತ್ ಪೈಗಂಬರ್(ಸ) ಯುದ್ಧ ಕವಚವನ್ನು ಧರಿಸಿದ್ದರು ಮತ್ತು ಅವರು ಡೇರೆಯಿಂದ ಹೊರಗೆ ಬಂದರು. ಅವರು ಹೀಗೆ ಉಚ್ಚರಿಸುತ್ತಿದ್ದರು: **ಸಯಹ್‌ಝುಮುಲ್ ಜಮ್‌ಉ ವಯುಅ್‌ಲೂನಲ್ ದಬರು ಬಲಿಸ್ಸಾಅತು ಅದ್ದೀ ವಅ್‌ಮುರ್**. ಸಮೀಪ ಕಾಲದಲ್ಲೇ ಇವರೆಲ್ಲರೂ ಪರಾಜಿತಗೊಳ್ಳುವರು. ಬೆನ್ನು ತಿರುಗಿಸಿ ಓಡುವರು. ಮುನ್ನೆಚ್ಚರಿಕೆ ನೀಡಲಾದ ಘಳಿಗೆ ಇದೇ ಆಗಿದೆ. ಇದು ಅತ್ಯಂತ ಕಠಿಣ ಮತ್ತು ಅತ್ಯಂತ ಕಹಿಯಾದ ಘಳಿಗೆ ಮತ್ತು ಸಮಯವಾಗಿದೆ.
(ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್ ವ ಸ್ಸೈರ್, ಹದೀಸ್–2915)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ) ಹೇಳುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್(ರ) ನನ್ನೊಂದಿಗೆ ಹೇಳಿದರು: ಬದ್ರ್ ದಿನದಂದು ಹಝ್ರತ್ ಪೈಗಂಬರ್(ಸ) ಮುಶ್ರಿಕರನ್ನು ನೋಡಿದರು. ಅವರು ಒಂದು ಸಾವಿರವಿದ್ದರು. ಸಹಾಬಿಯರು 319 ಇದ್ದರು. ಅಲ್ಲಾಹನ ಪೈಗಂಬರ್(ಸ) ಖಿಬ್ಲದ ಕಡೆಗೆ ಮುಖ ಮಾಡಿದರು. ಅನಂತರ ಅವರು ತನ್ನ ಎರಡೂ ಕೈಗಳನ್ನು ಚಾಚಿದರು ಮತ್ತು ತನ್ನ ಪ್ರಭುವನ್ನು ಉಚ್ಚ ಸ್ವರದಲ್ಲಿ ಹೀಗೆ ಕರೆದರು: **ಅಲ್ಲಾಹುಮ್ಮ ಅನ್‌ಜಿಝ್‌ಲಿ ಮಾ ವಅದತನೀ ಅಲ್ಲಾಹುಮ್ಮ ಆತಿ ಮಾವಅದ್‌ತನೀ ಅಲ್ಲಾಹುಮ್ಮ ಇನ್‌ತಹ್‌ಲಿಕ ಹಾಧ಼ಲ್ ಅಸಾಬತನ್, ಮಿನ್ ಅಹ್ಲಿಲ್ ಇಸ್ಲಾಮಿ ಲಾ ತಅ್‌ಬುದ್ ಫಿಲ್‌ಅರ್‌ಝಿ**. ಎಂದರೆ, ಹೇ ಅಲ್ಲಾಹ್, ನೀನು ನನ್ನೊಡನೆ ಮಾಡಿರುವ ವಾಗ್ದಾನವನ್ನು ಈಡೇರಿಸು. ನೀನು ನನ್ನೊಂದಿಗೆ ಮಾಡಿರುವ ವಾಗ್ದಾನವನ್ನು ದಯಪಾಲಿಸು. ಹೇ ಅಲ್ಲಾಹ್, ನೀನು ಮುಸ್ಲಿಮರ ಈ ಗುಂಪನ್ನು ನಾಶಪಡಿಸಿದರೆ, ಭೂಮಿಯಲ್ಲಿ ನಿನ್ನ ಆರಾಧನೆಯನ್ನು ಮಾಡಲಾಗದು. ಅವರು ಖಿಬ್ಲದ ಕಡೆಗೆ ಮುಖ ಮಾಡಿದ್ದರು. ಕೈಗಳನ್ನು ಹರಡಿದ್ದರು. ಅವರು ನಿರಂತರವಾಗಿ ತನ್ನ ಪ್ರಭುವನ್ನು ಉಚ್ಚ ಸ್ವರದಲ್ಲಿ ಕರೆದು ಪ್ರಾರ್ಥಿಸುತ್ತಿದ್ದರು. ಕೊನೆಗೆ ಅವರ ಹೊದಿಕೆ ಅವರ ಹೆಗಲುಗಳಿಂದ ಕೆಳಗೆ ಬಿತ್ತು. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದರು. ಅವರ ಹೊದಿಕೆಯನ್ನು ಎತ್ತಿದರು ಮತ್ತು ಅದನ್ನು ಅವರ ತೋಳುಗಳಲ್ಲಿ ಹಾಕಿದರು. ಅನಂತರ ಹಝ್ರತ್ ಪೈಗಂಬರ್(ಸ)ರನ್ನು ಹಿಂದಿನಿಂದ ತಬ್ಬಿಕೊಂಡು ಹೀಗೆ ಹೇಳಿದರು: ಯಾ ಅಲ್ಲಾಹನ ಪ್ರವಾದಿ, ನೀವು ನಿಮ್ಮ ಪ್ರಭುವಿನೊಡನೆ ರೋದನಯೊಂದಿಗೆ ಮಾಡಿದ ದುಆ ನಿಮಗೆ ಸಾಕು. ಅಲ್ಲಾಹನು ನಿಮ್ಮೊಡನೆ ಮಾಡಿದ ವಾಗ್ದಾನವನ್ನು ಖಂಡಿತ ಈಡೇರಿಸುವನು. ಆಗ ಅಲ್ಲಾಹನು ಈ ವಚನವನ್ನು ಅವತೀರ್ಣಗೊಳಿಸಿದನು: **ಇಝ್ ತಸ್ತಗೀಸೂನ ರಬ್ಬಕುಮ್ ಫಸ್ತಜಾಬಲಕುಮ್ ಅನ್ನಿ ಮುಮಿದ್ದುಕುಮ್ ಬಿಅಲ್‌ಫಿಮ್ಮಿನಲ್ ಮಲಾಇಕತಿ ಮುರ್‌ದಿಫೀನ್** (ಅಲ್‌ಅನ್‌ಫಾಲ್:10) ಎಂದರೆ, ನಿಮ್ಮ ಪ್ರಭುವಿನೊಡನೆ ನೀವು ಸಹಾಯವನ್ನು ಬೇಡುತ್ತಿದ್ದ ಸಂದರ್ಭ ಜ್ಞಾಪಿಸಿರಿ. ಆಗ ಅವನು, 'ಖಂಡಿತವಾಗಿಯೂ ಒಬ್ಬರ ನಂತರ ಇನ್ನೊಬ್ಬರಂತೆ ಬರುವ ಸಾವಿರ ದೇವದೂತರ (ಮಲಾಇಕ್‌ರ) ಮೂಲಕ ನಾನು ನಿಮಗೆ ಸಹಾಯ ಮಾಡುವೆನು' ಎಂದು ಉತ್ತರ ನೀಡಿದನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಬದ್ರ್‌ನ ಘಟನೆಯನ್ನು ಪ್ರಸ್ತಾಪಿಸುತ್ತಾ ಅದನ್ನು ಹೀಗೆ ಪ್ರಸ್ತಾಪಿಸಿರುವರು: ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸಿ ಹೀಗೆಯೂ ಹೇಳಿದರು: ಸತ್ಯನಿಷೇಧಿಗಳ ಸೈನ್ಯದಲ್ಲಿ ಕೆಲವರು ಸ್ವಂತ ಇಷ್ಟದಿಂದ ಈ ಯುದ್ಧದಲ್ಲಿ ಭಾಗವಹಿಸಿಲ್ಲ. ಬದಲಾಗಿ ಖುರೈಶಿ ಸರದಾರರ ಒತ್ತಾಯದ ಕಾರಣದಿಂದ ಭಾಗಿಯಾಗಿರುವರು. ಸತ್ಯದಲ್ಲಿ ಅವರ ಮನಸ್ಸಾರೆ ನಮ್ಮ ವಿರೋಧಿಗಳಲ್ಲ. ಅದೇ ರೀತಿಯಲ್ಲಿ ನಮ್ಮ ಕಷ್ಟದ ಕಾಲದಲ್ಲಿ ನಮ್ಮೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿದ ಕೆಲವರು ಸಹ ಆ ಸೈನ್ಯದಲ್ಲಿ ಇರುವರು. ಆದ್ದರಿಂದ ಅವರು ಮಾಡಿದ ಔದಾರ್ಯಕ್ಕೆ ಪ್ರತಿಯಾಗಿ ನಾವು ಅವರೊಡನೆ ಔದಾರ್ಯ ಮಾಡಬೇಕು. ಆದ್ದರಿಂದ ಅಂತಹ ಜನರ ಮೇಲೆ ಯಾರಾದರೂ ಮೇಲುಗೈ ಸಾಧಿಸಿದರೆ ಅವರಿಗೆ ಯಾವುದೇ ವಿಧದ ತೊಂದರೆಯನ್ನು ತಲುಪಿಸಬೇಡಿರಿ. ಹಝ್ರತ್ ಪೈಗಂಬರ್(ಸ) ವಿಶೇಷವಾಗಿ ಮೊದಲ ವಿಧದ ಜನರಲ್ಲಿ ಅಬ್ಬಾಸ್ ಬಿನ್ ಅಬ್ದುಲ್ ಮುತಲ್ಲಿಬ್‌ರ ಹೆಸರನ್ನು ಮತ್ತು ಎರಡನೇ ವಿಧದ ಜನರಲ್ಲಿ ಅಬುಲ್‌ಬಖ್ತರ್‌ನ ಹೆಸರನ್ನು ಪ್ರಸ್ತಾಪಿಸಿದರು. ಅವರನ್ನು ಕೊಲ್ಲಬಾರದು ಎಂದು ಹೇಳಿದರು. ಆದರೆ ಕೆಲವು ಅನಿವಾರ್ಯ ಸ್ಥಿತಿಗತಿಗಳು ಉಂಟಾದ ಕಾರಣದಿಂದ ಅಬುಲ್‌ಬಖ್ತರ್‌ರನ್ನು ಕೊಲ್ಲಲ್ಪಡುವುದರಿಂದ ತಪ್ಪಿಸಲಾಗಲಿಲ್ಲ. ಆದರೆ ಹಝ್ರತ್ ಪೈಗಂಬರ್(ಸ) ಅವರನ್ನು ಕೊಲ್ಲಬಾರದು ಎಂದು ಹೇಳಿದ್ದರು ಎಂದು ಅಬುಲ್‌ಬಖ್ತರಿಗೆ ಮರಣಕ್ಕೆ ಮುಂಚಿತವಾಗಿ ಗೊತ್ತಾಗಿತ್ತು. ಹೇಗಿದ್ದರೂ ಯುದ್ಧದ ಬಗ್ಗೆ ಹೀಗೆ ನಿರ್ದೇಶನ ಕೊಟ್ಟ ನಂತರ ಹಝ್ರತ್ ಪೈಗಂಬರ್(ಸ) ಪುನಃ ಶಾಮಿಯಾನದೊಳಗೆ ಹೋಗಿ ಪ್ರಾರ್ಥನೆಯಲ್ಲಿ ಮುಳುಗಿದರು. ಹಝ್ರತ್ ಅಬೂಬಕರ್(ರ) ಜೊತೆಗಿದ್ದರು. ಶಾಮಿಯಾನದ ಸುತ್ತಮುತ್ತ ಅನ್ಸಾರಿನ ಒಂದು ಸಂಘ ಸಅದ್ ಬಿನ್ ಮುಆಧ್‌ರ ಮೇಲ್ನೋಟದಲ್ಲಿ ಕಾವಲು ನೀಡುತ್ತಿದ್ದರು. ಕೆಲವು ಸಮಯದ ನಂತರ ಮೈದಾನದಲ್ಲಿ ಒಂದು ಗದ್ದಲವೆದ್ದಿತು. ಖುರೈಶಿಯರ ಸೈನ್ಯ ಆಕ್ರಮಣ ನಡೆಸಿರುವರು ಎಂದು ಗೊತ್ತಾಯಿತು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಬಹಳ ನೋವಿನಿಂದ ಅಲ್ಲಾಹನ ಮುಂದೆ ಕೈಯನ್ನು ಚಾಚಿ ಕಳವಳದಿಂದ ಹೀಗೆ ಹೇಳುತ್ತಿದ್ದರು: **ಅಲ್ಲಾಹುಮ್ಮ ಇನ್ನೀ ಇನ್‌ಶದ್ದುಖ ಅಹ್‌ದಿಕ, ವವಅ್‌ದಿಕ ಅಲ್ಲಾಹುಮ್ಮ ಇನ್‌ತಹ್‌ಲಿಕ ಹಾಧಿಹಿಲ್ ಅಸಾಬತಿನ್ ಮಿನ್ ಅಹ್ಲಿಲ್ ಇಸ್ಲಾಮಿ**

**ಲಾ ತಅ್‌ಬುದ್ ಫಿಲ್‌ಅರ್‌ಝಿ** ಹೇ ಅಲ್ಲಾಹ್, ನೀನು ನನ್ನೊಡನೆ ಮಾಡಿರುವ ವಾಗ್ದಾನವನ್ನು ಈಡೇರಿಸು. ನೀನು ನನ್ನೊಂದಿಗೆ ಮಾಡಿರುವ ವಾಗ್ದಾನವನ್ನು ದಯಪಾಲಿಸು. ಹೇ ನನ್ನ ಮಾಲಿಕ, ನೀನು ಮುಸ್ಲಿಮರ ಈ ಗುಂಪನ್ನು ನಾಶಪಡಿಸಿದರೆ, ಭೂಮಿಯಲ್ಲಿ ನಿನ್ನನ್ನು ಆರಾಧಿಸುವವರು ಯಾರೂ ಇರಲಾರರು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಎಷ್ಟು ನೋವಿನಲ್ಲಿದ್ದರು ಎಂದರೆ, ಅವರು ಕೆಲವೊಮ್ಮೆ ಸಜ್‌ದ ಮಾಡುತ್ತಾ ಕೆಲವೊಮ್ಮೆ ನಿಂತುಕೊಂಡು ಅಲ್ಲಾಹನನ್ನು ಕರೆದು ಪ್ರಾರ್ಥಿಸುತ್ತಿದ್ದರು. ಅವರ ಹೊದಿಕೆ ಹೆಗಲುಗಳಿಂದ ಬೀಳುತಿತ್ತು. ಹಝ್ರತ್ ಅಬೂಬಕರ್(ರ) ಅದನ್ನು ಎತ್ತಿಯೆತ್ತಿ ಅವರ ತೋಳುಗಳಲ್ಲಿ ಹಾಕುತ್ತಿದ್ದರು. ಹಝ್ರತ್ ಅಲಿ(ರ) ಹೇಳುತ್ತಾರೆ: ನಾನು ಹೋರಾಡುವಾಗ ನನಗೆ ಹಝ್ರತ್ ಪೈಗಂಬರ್(ಸ)ರ ನೆನಪು ಬರುವಾಗ ನಾನು ಅವರ ಚಪ್ಪರದ ಕಡೆಗೆ ವೇಗವಾಗಿ ಹೋಗುತ್ತಿದ್ದೆ. ಆದರೆ ಹೋದಾಗಲೆಲ್ಲ ನಾನು ಅವರನ್ನು ಸಜ್‌ದದಲ್ಲಿ ರೋದಿಸುತ್ತಾ ಇರುವುದನ್ನು ಕಂಡೆನು. **ಯಾ ಹಯ್ಯು ಯಾ ಖಯ್ಯೂಮ್** ಎಂದು ಅವರು ಹೇಳುತ್ತಿರುವುದನ್ನು ನಾನು ಕೇಳುತ್ತಿದ್ದೆ. ಎಂದರೆ, ಹೇ ನನ್ನ ಜೀವಂತ ದೇವಾ, ಹೇ ನನ್ನ ಜೀವದಾಯಕ ಪ್ರಭೂ. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಈ ಸ್ಥಿತಿಯನ್ನು ಕಂಡು ಕಳವಳಗೊಳ್ಳುತ್ತಿದ್ದರು ಮತ್ತು ಕೆಲವೊಮ್ಮೆ ಅನಿಯಂತ್ರಿತವಾಗಿ ಹೀಗೆ ಹೇಳುತ್ತಿದ್ದರು: ಯಾ ರಸೂಲಲ್ಲಾಹ್, ನನ್ನ ತಂದೆ ತಾಯಂದಿರು ನಿಮಗೆ ಅರ್ಪಿತವಾಗಲಿ, ನೀವು ಗಾಬರಿಗೊಳ್ಳಬೇಡಿರಿ, ಅಲ್ಲಾಹನು ತನ್ನ ವಾಗ್ದಾನಗಳನ್ನು ಖಂಡಿತ ಈಡೇರಿಸುವನು. ಆದರೆ ಫಾರಸಿ ಭಾಷೆಯ ಸತ್ಯವಾದ ನಾಣ್ಣುಡಿಯಂತೆ **ಹರ್‌ಕೆ ಆರಿಫ್ ತರಾಸತ್ ತರ್‌ಸಾನ್‌ತರ್**. ಎಂದರೆ, ಒಬ್ಬ ವ್ಯಕ್ತಿಗೆ ಅಲ್ಲಾಹನ ಬಗ್ಗೆ ಎಷ್ಟು ಹೆಚ್ಚು ಅರಿವು ಇರುತ್ತದೋ ಅಷ್ಟೇ ಹೆಚ್ಚು ಅವನು ಅಲ್ಲಾಹನನ್ನು ಭಯಪಡುತ್ತಾನೆ. ಹಝ್ರತ್ ಪೈಗಂಬರ್(ಸ) ನಿರಂತರವಾಗಿ ಪ್ರಾರ್ಥನೆ ಮತ್ತು ಕಳಕಳಿಕೆಯಲ್ಲಿ ನಿರತರಾಗಿದ್ದರು. (ಸೀರತ್ ಖಾತಮನ್ನಬೀಈನ್, ಪುಟ–360–361)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಬದ್ರ್ ಯುದ್ಧದ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಮಾಡಿದ್ದು ಕಣ್ಣಿದ್ದವನಿಗೆ ಅಚ್ಚರಿಗೊಳ್ಳಲು ಸಾಕು. ಹಝ್ರತ್ ಪೈಗಂಬರ್(ಸ)ರ ಹೃದಯದಲ್ಲಿ ಅಲ್ಲಾಹನ ಬಗ್ಗೆ ಎಷ್ಟು ಭಯವಿತ್ತು ಎಂದು ಇದರಿಂದ ಅರಿವಾಗುತ್ತದೆ. ಬದ್ರ್ ಯುದ್ಧದ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಜೊತೆಗೆ ತ್ಯಾಗಶೀಲರಾದ ಶೂರರೊಂದಿಗೆ ಶತ್ರುಗಳನ್ನು ಎದುರಿಸಲಿಕ್ಕಾಗಿ ಮುಂದಾದಾಗ, ದೈವಿಕ ಸಹಾಯದ ಲಕ್ಷಣಗಳು ಪ್ರಕಟವಾಗುತ್ತಿತ್ತು. ಸತ್ಯನಿಷೇಧಿಗಳು ತಮ್ಮ ಹೆಜ್ಜೆಗಳನ್ನು ಸುದೃಢಗೊಳಿಸಲಿಕ್ಕಾಗಿ ಗಟ್ಟಿ ನೆಲದಲ್ಲಿ ಡೇರೆಗಳನ್ನು ಹಾಕಿದ್ದರು. ಮುಸ್ಲಿಮರಿಗೆ ಮರಳಿನ ಜಾಗವನ್ನು ಬಿಟ್ಟಿದ್ದರು. ಆದರೆ ಅಲ್ಲಾಹನು ಮಳೆಯನ್ನು ವರ್ಷಿಸಿ ಸತ್ಯನಿಷೇಧಿಗಳ ಡೇರೆಗಳು ಇದ್ದ ಪ್ರದೇಶವನ್ನು ಕೆಸರಿನಿಂದ ತುಂಬಿಸಿದನು ಮತ್ತು ಮುಸ್ಲಿಮರು ಇದ್ದ ಸ್ಥಳ ಸುದೃಢಗೊಂಡಿತು. ಅದೇ ರೀತಿಯ ಅನೇಕ ಆಕಾಶೀಯ ಸಹಾಯಗಳು ಪ್ರಕಟವಾಗುತ್ತಿದ್ದುವು. ಹೀಗಿದ್ದರೂ ಅಲ್ಲಾಹನ ಭಯ ಹಝ್ರತ್ ಪೈಗಂಬರ್(ಸ)ರ ಹೃದಯದಲ್ಲಿ ಬಹಳವಿತ್ತು. ಎಲ್ಲ ರೀತಿಯ ವಾಗ್ದಾನಗಳು ಮತ್ತು ದೃಷ್ಟಾಂತಗಳು ಇದ್ದರೂ ಅಲ್ಲಾಹನು ಯಾರನ್ನೂ ಆಶ್ರಯಿಸಿಲ್ಲವೆಂಬ ಕಾರಣದಿಂದ ಹಝ್ರತ್ ಪೈಗಂಬರ್(ಸ) ಹೆದರುತ್ತಿದ್ದರು. ಮುಸ್ಲಿಮರಿಗೆ ವಿಜಯ ನೀಡಬೇಕೆಂದು ಕಳವಳದಿಂದ ಅಲ್ಲಾಹನ ಮುಂದೆ ದುಆ ಮಾಡುತ್ತಿದ್ದರು. ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಬದ್ರ್ ಯುದ್ಧದ ಸಂದರ್ಭದಲ್ಲಿ ಗೋಳಾಕೃತಿಯ ಡೇರೆಯಲ್ಲಿದ್ದರು. ಅವರು ಹೀಗೆ ಹೇಳುತ್ತಿದ್ದರು: ಹೇ ನನ್ನ ಅಲ್ಲಾಹ್, ನಾನು ನಿನ್ನದೇ ಒಡಂಬಡಿಕೆ ಮತ್ತು ನಿನ್ನದೇ ವಾಗ್ದಾನವನ್ನು ನೆನಪಿಸುತ್ತೇನೆ. ಅವುಗಳನ್ನು ಈಡೇರಿಸು. ಹೇ ನನ್ನ ಪ್ರಭೂ, ನೀನೇ ಮುಸ್ಲಿಮರ ನಾಶವನ್ನು ಬಯಸುವುದಾದರೆ, ಇಂದಿನ ನಂತರ ನಿನ್ನನ್ನು ಆರಾಧಿಸುವವರು ಯಾರೂ ಇರಲಾರರು.

ಆಗ ಹಝ್ರತ್ ಅಬೂಬಕರ್(ರ) ಅವರ ಕೈಯನ್ನು ಹಿಡಿದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಸಾಕು, ನೀವಂತು ನಿಮ್ಮ ಪ್ರಭುವಿನೊಂದಿಗೆ ದುಆ ಮಾಡುವುದರಲ್ಲಿ ಮಿತಿಮೀರಿದ್ದೀರಿ. ಹಝ್ರತ್ ಪೈಗಂಬರ್(ಸ) ಆ ಸಂದರ್ಭದಲ್ಲಿ ಯುದ್ಧಕವಚವನ್ನು ಧರಿಸಿದ್ದರು. ಅವರು ಡೇರೆಯಿಂದ ಹೊರಗೆ ಬಂದು ಹೀಗೆ ಹೇಳಿದರು: ಈಗ ಆ ಸೈನಿಕರು ಪರಾಜಿತಗೊಳ್ಳುವರು. ಅವರು ಬೆನ್ನು ತಿರುಗಿಸಿ ಓಡುವರು. ಇದು ಅವರ ಕೊನೆಯ ಘಳಿಗೆಯಾಗಿದೆ. ಇದು ಅವರಿಗೆ ಅತ್ಯಂತ ಕಠಿಣ ಮತ್ತು ಅತ್ಯಂತ ಕಹಿಯಾದ ಸಮಯವಾಗಿದೆ. ಅಲ್ಲಾಹನ ಭಯ ಹಝ್ರತ್ ಪೈಗಂಬರ್(ಸ)ರಿಗೆ ಎಷ್ಟಿತ್ತು ಎಂದರೆ, ವಿಜಯದ ವಾಗ್ದಾನಗಳಿದ್ದರೂ ಅಲ್ಲಾಹನಿಗೆ ಯಾರ ಪರಿವೆ ಇಲ್ಲವೆಂಬುದರ ಚಿಂತೆ ಅವರಿಗೆ ಇತ್ತು. ಆದರೆ ಅದರೊಂದಿಗೆ ದೃಢವಿಶ್ವಾಸವೂ ಇತ್ತು. ಆದ್ದರಿಂದ ಹಝ್ರತ್ ಅಬೂಬಕರ್(ರ) ವಿನಂತಿ ಮಾಡಿದಾಗ ಹಝ್ರತ್ ಪೈಗಂಬರ್(ಸ) ಉಚ್ಚಸ್ವರದಲ್ಲಿ ಹೇಳಿದರು: ನನಗೆ ಶತ್ರುಗಳ ಭಯವಿಲ್ಲ, ಶತ್ರುಗಳು ಪರಾಜಿತರಾಗಿ ನಿಂದ್ಯರಾಗುವರು ಮತ್ತು ಶತ್ರುಗಳ ಸರದಾರರು ಇಲ್ಲೇ ಕೊಲ್ಲಲ್ಪಡುವರು ಎಂದು ಅಲ್ಲಾಹನು ನನಗೆ ತಿಳಿಸಿದ್ದಾನೆ. ಹಾಗೆಯೇ ಆಯಿತು. (ಸೀರತ್ ಅನ್ನಬಿ(ಸ), ಅನ್ವಾರುಲ್ ಉಲೂಮ್, ಸಂಪುಟ–1, ಪುಟ–466–467)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಯನಿಷೇಧಿಗಳ ಮೇಲೆ ವಿಜಯ ಲಭಿಸುವುದಾಗಿ ಪದೇ ಪದೇ ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ವಾಗ್ದಾನ ಮಾಡಲಾಗಿತ್ತು. ಆದರೆ ಇಸ್ಲಾಮಿನ ಮೊದಲ ಯುದ್ಧವಾದ ಬದ್ರ್ ಯುದ್ಧ ಶುರುವಾದಾಗ ಹಝ್ರತ್ ಪೈಗಂಬರ್(ಸ) ರೋದಿಸಲು ಮತ್ತು ದುಆ ಮಾಡಲು ಆರಂಭಿಸಿದರು. **ಅಲ್ಲಾಹುಮ್ಮ ಇನ್ ಅಹ್‌ಲಕ್‌ತ ಹಾಧಿಹಿಲ್ ಅಸಾಬತನ್, ಫಲನ್ ತಅ್‌ಬುದ್ ಫಿಲ್‌ಅರ್‌ಝಿ ಅಬದಾ**. ಎಂದರೆ, ಹೇ ನನ್ನ ಪ್ರಭೂ, ಕೇವಲ 313 ಜನರು ಇರುವ ಈ ಸಂಘವನ್ನು ನೀನಿಂದು ನಾಶಮಾಡಿದರೆ, ಅನಂತರ ಖಿಯಾಮತ್ ತನಕ ನಿನ್ನನ್ನು ಯಾರೂ ಆರಾಧಿಸಲಾರರು ಎಂದು ಹೇಳುತ್ತಾ ಹಝ್ರತ್ ಪೈಗಂಬರ್(ಸ) ದುಆ ಮಾಡುತ್ತಿದ್ದರು. ಇದನ್ನು ಹಝ್ರತ್ ಪೈಗಂಬರ್(ಸ)ರ ನಾಲಗೆಯಿಂದ ಹಝ್ರತ್ ಅಬೂಬಕರ್(ರ) ಆಲಿಸಿದಾಗ ಅವರು ಹೇಳಿದರು: ಯಾ ರಸೂಲುಲ್ಲಾಹ್, ನೀವೇಕೆ ಇಷ್ಟು ಕಳವಳಗೊಳ್ಳುತ್ತೀರಿ. ವಿಜಯವನ್ನು ನೀಡುವನು ಎಂದು ಅಲ್ಲಾಹನು ನಿಮ್ಮೊಡನೆ ಸುದೃಢವಾದ ವಾಗ್ದಾನವನ್ನು ನೀಡಿರುವನು. ಹಝ್ರತ್ ಪೈಗಂಬರ್(ಸ) ಹೇಳಿದರು: ಇದು ಸತ್ಯವಾಗಿದೆ. ಆದರೆ ಅಲ್ಲಾಹನಿಗೆ ಯಾರ ಪರಿವೆಯೂ ಇಲ್ಲ ಎಂಬುದರ ಕಡೆಗೆ ನನ್ನ ಯೋಚನೆ ಹೋಗುತ್ತಿದೆ. ಎಂದರೆ, ಯಾವುದಾದರೂ ವಾಗ್ದಾನವನು ಈಡೇರಿಸುವುದು ಅಲ್ಲಾಹನಿಗೆ ಕಡ್ಡಾಯವೇನಲ್ಲ. (ಬರಾಹೀನೆ ಅಹ್ಮದೀಯ, ಭಾಗ–5, ರೂಹಾನಿ ಖಝಾಈನ್, ಸಂಪುಟ–21, ಪುಟ–255–256)

ಘೋರವಾದ ಯುದ್ಧ ಶುರುವಾದಾಗ ಹಝ್ರತ್ ಪೈಗಂಬರ್(ಸ) ಚಪ್ಪರದಿಂದ ಹೊರಗೆ ಬಂದು ಜನರನ್ನು ಹೋರಾಡಲು ಹುರಿದುಂಬಿಸಿದರು. ಜನರು ತಮ್ಮ ಪಂಕ್ತಿಗಳಲ್ಲಿ ಅಲ್ಲಾಹನ ಸ್ಮರಣೆ ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಸ್ವತಃ ಉತ್ತಮವಾಗಿ ಯುದ್ಧದಲ್ಲಿ ಹೋರಾಡಿದರು. ಹಝ್ರತ್ ಪೈಗಂಬರ್(ಸ)ರ ಪಕ್ಕದಲ್ಲೇ ಇದ್ದುಕೊಂಡು ಹಝ್ರತ್ ಅಬೂಬಕರ್(ರ) ಯುದ್ಧ ಮಾಡುತ್ತಿದ್ದರು.

ಹಝ್ರತ್ ಅಬೂಬಕರ್(ರ)ರ ಅತುಲ್ಯವಾದ ಶೂರತೆ ಆಗ ಕಂಡುಬಂತು. ಅವರು ಪ್ರತಿಯೊಬ್ಬ ದುಷ್ಟನಾದ ಸತ್ಯನಿಷೇಧಿಯೊಂದಿಗೆ ಹೋರಾಡಲು ತಯಾರಿದ್ದರು. ಎದುರಾಗಿ ಬರುವವನು ಸ್ವಂತ ಮಗನಾಗಿದ್ದರೂ ಸರಿ. ಈ ಯುದ್ಧದಲ್ಲಿ ಅವರ ಮಗನಾದ ಅಬ್ದುರ್ರಹ್ಮಾನ್ ಸತ್ಯನಿಷೇಧಿಗಳ ಪರವಾಗಿ ಯುದ್ಧ ಮಾಡಲು ಬಂದಿದ್ದನು. ಅವರು ಅರೇಬಿಯದ ಮಹಾ ಶೂರರಲ್ಲಿ ಒಬ್ಬರಾಗಿ ಗಣಿಸಲ್ಪಡುತ್ತಿದ್ದರು. ಅವರು ಖುರೈಶಿಯರ ನಡುವೆ ಬಿಲ್ಲುಗಾರಿಕೆಯಲ್ಲಿ ಅತ್ಯಂತ ನಿಪುಣರಾಗಿದ್ದರು. ಅವನು ಇಸ್ಲಾಂ ಸ್ವೀಕರಿಸಿದಾಗ ಅವನು ತನ್ನ ತಂದೆಯಾದ ಅಬೂಬಕರ್(ರ)ರೊಡನೆ ಹೇಳಿದರು: ಬದ್ರ್ ಯುದ್ಧದಂದು ನೀವು ನನ್ನ ನೇರವಾಗಿ ಮತ್ತು ನನಗೆ ಗುರಿಯಾಗಿ ಇದ್ದೀರಿ. ಆದರೆ ನಾನು ನಿಮ್ಮಿಂದ ಬೇರ್ಪಟ್ಟು ನಿಂತೆ ಮತ್ತು ನಿಮ್ಮನ್ನು ಕೊಲ್ಲಲಿಲ್ಲ. ಇದನ್ನು ಕೇಳಿ ಹಝ್ರತ್ ಅಬೂಬಕರ್(ರ) ಹೇಳಿದರು: ನೀನು ನನಗೆ ನೇರ ಗುರಿಯಾಗಿ ಇರುವುದನ್ನು ನಾನು ನೋಡಿದ್ದರೆ ನಾನು ನಿನ್ನಿಂದ ಬೇರ್ಪಟ್ಟು ಹೋಗುತ್ತಿರಲಿಲ್ಲ. ಎಂದರೆ ಖಂಡಿತ ಕೊಲ್ಲುತ್ತಿದ್ದೆ. (ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ), ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲಿ ಮುಹಮ್ಮದ್ ಸಲಾಬಿ, ಪುಟ–108–109, ಅಲ್‌ಫುರ್ಖಾನ್ ಪಾಕಿಸ್ತಾನ್)

ಇದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಒಂದು ಬಾರಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಊಟ ಮಾಡುವಾಗ ಜೊತೆಗಿದ್ದರು. ಬೇರೆ ಬೇರೆ ವಿಷಯಗಳಲ್ಲಿ ಮಾತುಕತೆ ನಡೆಯುತ್ತಿತ್ತು. ಹಝ್ರತ್ ಅಬೂಬಕರ್(ರ)ರ ಹಿರಿಯ ಮಗನಾದ ಹಝ್ರತ್ ಅಬ್ದುರ್ರಹ್ಮಾನ್ ಬದ್ರ್ ಅಥವಾ ಉಹದ್ ಯುದ್ಧದಲ್ಲಿ ಸತ್ಯನಿಷೇಧಿಗಳ ಪರವಾಗಿ ಯುದ್ಧದಲ್ಲಿ ಭಾಗಿಯಾಗಿದ್ದರು. ಅವರು ಅನಂತರ ಮುಸ್ಲಿಮರಾದರು. ಅವರು ಊಟ ಮಾಡುತ್ತಿರುವಾಗ ಮಾತು ಮಾತಲ್ಲಿ ಹೀಗೆ ಹೇಳಿದರು: ಅಪ್ಪಾ, ಈ ಯುದ್ಧದಲ್ಲಿ ಒಂದು ಜಾಗದಿಂದ ನೀವು ದಾಟಿಹೋಗುತ್ತಿದ್ದೀರಿ, ಆ ಸಮಯದಲ್ಲಿ ನಾನು ಒಂದು ಕಲ್ಲಿನ ಹಿಂದೆ ಅಡಗಿ ಕುಳಿತಿದ್ದೆ. ನಾನು ಬಯಸಿದ್ದರೆ, ಹಲ್ಲೆ ನಡೆಸಿ ನಿಮ್ಮನ್ನು ಕೊಲ್ಲಬಹುದಾಗಿತ್ತು. ಆದರೆ ನನ್ನ ತಂದೆಯನ್ನು ಏಕೆ ಕೊಲ್ಲಲಿ ಎಂದು ನಾನು ಯೋಚಿಸಿದೆ. ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ಅಲ್ಲಾಹನು ನಿನಗೆ ವಿಶ್ವಾಸವನ್ನು ದಯಪಾಲಿಸಲು ಬಯಸಿದ್ದನು.

ಆದ್ದರಿಂದ ನೀನು ಬಚಾವಾದೆ. ಇಲ್ಲದಿದ್ದರೆ, ಅಲ್ಲಾಹನಾಣೆ, ನಾನು ನಿನ್ನನ್ನು ನೋಡಿದ್ದರೆ, ಖಂಡಿತ ಕೊಲ್ಲುತ್ತಿದ್ದೆ. (ತಫ್ಸೀರೆ ಕಬೀರ್, ಸಂಪುಟ–9, ಪುಟ–588)

ಬದ್ರ್ ಯುದ್ಧದ ಸೆರೆಯಾಳುಗಳ ಕುರಿತು ಹಝ್ರತ್ ಪೈಗಂಬರ್(ಸ) ನಡೆಸಿದ ಸವಾಲೋಚನೆ ಮತ್ತು ಹಝ್ರತ್ ಅಬೂಬಕರ್(ರ)ರ ಅಭಿಪ್ರಾಯ ಮತ್ತು ಆ ಅಭಿಪ್ರಾಯದ ಪ್ರಕಾರ ನಡೆಯಲಾದ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಬರೆಯುತ್ತಾರೆ: ಮದೀನ ತಲುಪಿ ಹಝ್ರತ್ ಪೈಗಂಬರ್(ಸ) ಕೈದಿಗಳ ಕುರಿತು ಸಮಾಲೋಚನೆ ನಡೆಸಲು ಯೋಚಿಸಿದರು. ಅರೇಬಿಯದಲ್ಲಿ ಸಾಮಾನ್ಯವಾಗಿ ಕೈದಿಗಳನ್ನು ಕೊಲ್ಲಲು ಅಥವಾ ಅವರನ್ನು ಸ್ಥಾಯಿಯಾಗಿ ಗುಲಾಮರನ್ನಾಗಿ ಮಾಡುವ ಸಂಪ್ರದಾಯವಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ಮನಸ್ಸಿಗೆ ಅದು ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಅದರ ಕುರಿತು ಯಾವುದೇ ದೈವಿಕ ಆಜ್ಞೆ ಅವತೀರ್ಣವಾಗಿರಲಿಲ್ಲ. ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಅಭಿಪ್ರಾಯದಲ್ಲಿ ಅವರಿಂದ ಪರಿಹಾರ ಧನವನ್ನು ಪಡೆದು ಸ್ವತಂತ್ರಗೊಳಿಸಬೇಕು. ಏಕೆಂದರೆ ಅಷ್ಟಕ್ಕೂ ಅವರು ನಮ್ಮದೇ ಸಹೋದರರೇ ಆಗಿರುವರು. ಅವರಿಂದಲೇ ಇಸ್ಲಾಮಿಗಾಗಿ ತ್ಯಾಗವನ್ನು ಮಾಡುವವರು ಹುಟ್ಟಬಹುದು. ಆದರೆ ಹಝ್ರತ್ ಉಮರ್(ರ) ಈ ಅಭಿಪ್ರಾಯವನ್ನು ವಿರೋಧಿಸಿದರು. ಧರ್ಮದ ವಿಷಯದಲ್ಲಿ ಸಂಬಂಧಗಳನ್ನು ಲೆಕ್ಕಿಸಬಾರದು ಮತ್ತು ಈ ಜನರು ತಮ್ಮ ಕೃತ್ಯಗಳಿಂದ ಕೊಲ್ಲಲ್ಪಡಲು ಅರ್ಹರಾಗಿರುವರು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಇವರೆಲ್ಲರನ್ನು ವಧಿಸಬೇಕು. ಮಾತ್ರವಲ್ಲ ಮುಸ್ಲಿಮರು ಸ್ವತಃ ತಮ್ಮ ಕೈಗಳಿಂದ ತಮ್ಮ ತಮ್ಮ ಸಂಬಂಧಿಕರಾದ ಶತ್ರುಗಳನ್ನು ಕೊಲ್ಲಬೇಕು ಎಂದು ಹಝ್ರತ್ ಉಮರ್(ರ) ಹೇಳಿದರು. ಹಝ್ರತ್ ಪೈಗಂಬರ್(ಸ) ತನ್ನ ಸಹಜವಾದ ಕಾರುಣ್ಯದಿಂದ ಪ್ರಭಾವಿತರಾಗಿ ಹಝ್ರತ್ ಅಬೂಬಕರ್(ರ)ರ ಸಲಹೆಯನ್ನು ಇಷ್ಟಪಟ್ಟರು ಮತ್ತು ಕೊಲ್ಲುವುದಕ್ಕೆ ವಿರುದ್ಧವಾಗಿ ತೀರ್ಪು ನೀಡಿದರು ಮತ್ತು ಮುಶ್ರಿಕರಲ್ಲಿ ಪರಿಹಾರ ಧನ ಇತ್ಯಾದಿಗಳನ್ನು ಪಾವತಿಸುವವರನ್ನು ಸ್ವತಂತ್ರಗೊಳಿಸಲು ಆದೇಶಿಸಿದರು. ಅನಂತರ ಅದರ ಪ್ರಕಾರವೇ ದೈವಿಕ ಆಜ್ಞೆ ಅವತೀರ್ಣವಾಯಿತು. (ಸೀರತ್ ಖಾತಮನ್ನಬೀಈನ್, ಪುಟ–367–368)

ಮದೀನದಲ್ಲಿ ಒಂದು ಸಲ ಹಝ್ರತ್ ಅಬೂಬಕರ್(ರ) ಮತ್ತು ಇತರ ಸಹಾಬಿಯರು ರೋಗಿಯಾದರು. ಈ ಕುರಿತು ಹಝ್ರತ್ ಆಯಿಶ(ರ) ಒಂದು ವರದಿಯಿದೆ. ಅವರು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಬಂದಾಗ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಬಿಲಾಲ್(ರ) ರೋಗಿಯಾದರು. ನಾನಿಬ್ಬರ ಬಳಿಗೂ ಹೋಗಿ ಕೇಳಿದೆ: ಅಪ್ಪಾ, ನೀವು ಹೇಗಿದ್ದೀರಿ? ಬಿಲಾಲ್ ನೀವು ಹೇಗಿದ್ದೀರಿ? ಹಝ್ರತ್ ಅಬೂಬಕರ್(ರ)ರಿಗೆ ಜ್ವರ ಬರುವಾಗ ಅವರು ಈ ಪದ್ಯವನ್ನು ಹೇಳುತ್ತಿದ್ದರು:

**ಕುಲ್ಲು ಇಮ್‌ರಉನ್ ಮಸ್‌ಬಹ್ ಫೀ ಅಹ್ಲಿಹೀ,**
**ವಲ್‌ಮೌತು ಅದ್‌ನಾ ಮಿನ್ ಶಿರಾಕಿ ಮಾಲ್.**

ಅದರ ಅರ್ಥ ಹೀಗಿದೆ: ಪ್ರತಿಯೊಬ್ಬ ವ್ಯಕ್ತಿ ಬೆಳಿಗ್ಗೆ ಏಳುವಾಗ ಅವನೊಡನೆ ಸುಪ್ರಭಾತ ಎಂದು ಹೇಳಲಾಗುತ್ತದೆ, ಸತ್ಯದಲ್ಲಿ ಮರಣ ಅವನ ಬೂಟಿನ ಬಳ್ಳಿಗಿಂತ ಹತ್ತಿರವಾಗಿರುತ್ತದೆ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಜ್ವರ ಕಡಿಮೆಯಾಗುವಾಗ ಅವರು ಉಚ್ಚ ಸ್ವರದಲ್ಲಿ ಕೆಲವು ಪದ್ಯ ಪಂಕ್ತಿಗಳನ್ನು ಹೇಳುತ್ತಿದ್ದರು. ಪದ್ಯ ಪಂಕ್ತಿಗಳಿಂದ ಮಕ್ಕದ ಸುತ್ತಮುತ್ತದ ವಸತಿಗಳ ಪ್ರಸ್ತಾಪ ಮಾಡುತ್ತಿದ್ದರು ಮತ್ತು ಅವುಗಳನ್ನು ನೆನಪು ಮಾಡುತ್ತಿದ್ದರು. ಹಝ್ರತ್ ಆಯಿಶ(ರ) ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದೆ ಮತ್ತು ಎಲ್ಲ ಸಂಗತಿಗಳನ್ನು ಅವರೊಡನೆ ಹೇಳಿದೆ. ಎಂದರೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಬಿಲಾಲ್(ರ) ಹೇಳಿದ್ದನ್ನು ಹಝ್ರತ್ ಆಯಿಶ(ರ) ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದರು. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಮಕ್ಕ ನಮಗೆ ಪ್ರಿಯವಾಗಿರುವ ರೀತಿಯಲ್ಲೇ ಮದೀನವನ್ನು ನಮಗೆ ಪ್ರಿಯವನ್ನಾಗಿ ಮಾಡು, ಅದಕ್ಕಿಂತ ಹೆಚ್ಚು ಪ್ರಿಯವನ್ನಾಗಿ ಮಾಡು. ಇದನ್ನು ಆರೋಗ್ಯದಾಯಕ ಪ್ರದೇಶವನ್ನಾಗಿ ಮಾಡು. ನಮಗಾಗಿ ಅದರ ಸಾಅ್ ಮತ್ತು ಮುದ್ದ್‌ನಲ್ಲಿ ಅನುಗ್ರಹ ವರ್ಷಿಸು, ಸಾಅ್ ಮತ್ತು ಮುದ್ದ್ ಎಂಬುದು ಅಲ್ಲಿನ ತೂಕ ಮಾಡಲು ಉಪಯೋಗಿಸುವ ಅಳತೆಯ ಪಾತ್ರೆಗಳಾಗಿದ್ದುವು. ಇಲ್ಲಿನ ಜ್ವರವನ್ನು ಜುಹ್‌ಫದ ಕಡೆಗೆ ವರ್ಗಾವಣೆ ಮಾಡು. ಜುಹ್‌ಫ ಎಂಬುದು ಮಕ್ಕದಿಂದ ಮದೀನದ ಕಡೆಯಲ್ಲಿ 82 ಮೈಲುಗಳ ದೂರದಲ್ಲಿರುವ ಒಂದು ಪಟ್ಟಣವಾಗಿದೆ. (ಸಹಹ್ ಬುಖಾರಿ ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್–3926) (ಶರಹ್ ಅಝ್ಝುರ್‌ಖಾನಿ, ಸಂಪುಟ–2, ಪುಟ–172, ದಾರುಲ್ ಕುತುಬ್ ಅಲ್‌ಇಲ್‌ಮಿಯ ಬೈರೂತ್ 1996)

ಉಹದ್ ಯುದ್ಧದ ಬಗ್ಗೆ ಹೀಗೆ ವರದಿಯಿದೆ: ಹಿಜರಿ 3, ಶವ್ವಾಲ್ ತಿಂಗಳಲ್ಲಿ ಎಂದರೆ ಕ್ರಿ.ಶ. 624ರಲ್ಲಿ ಈ ಯುದ್ಧ ಮುಸ್ಲಿಮರ ಮತ್ತು ಮಕ್ಕದ ಖುರೈಶಿಗಳ ನಡುವೆ ನಡೆಯಿತು. ಹಿಜರಿ 3ರ ಕೊನೆಯಲ್ಲಿ ಮಕ್ಕದ ಖುರೈಶಿಗಳು ಮತ್ತು ಅವರ ಸಹಾಯಕ ಗೋತ್ರಗಳನ್ನು ಒಳಗೊಂಡ ಸೈನ್ಯ ಮದೀನದ ಮೇಲೆ ಆಕ್ರಮಣ ನಡೆಸಲು ಬರುತ್ತಿರುವುದಾಗಿ ಮಾಹಿತಿ ಲಭಿಸಿತು. ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಒಟ್ಟುಗೂಡಿಸಿ ಖುರೈಶಿಗಳು ದಾಳಿ ನಡೆಸುವುದರ ಕುರಿತು ತಿಳಿಸಿ ಅವರೊಡನೆ ಅದರ ಕುರಿತು ಸಮಾಲೋಚನೆ ನಡೆಸಿದರು. ಮದೀನದಲ್ಲೇ ಇದ್ದುಕೊಂಡು ಅವರನ್ನು ಎದುರಿಸಬೇಕೇ? ಅಥವಾ ಮದೀನದ ಹೊರಗೆ ಹೋಗಿ ಹೋರಾಟ ನಡೆಸಬೇಕೇ ಎಂಬುದರ ಬಗ್ಗೆ ಸಲಹೆ ಕೇಳಿದರು. (ಸೀರತ್ ಖಾತಮನ್ನಬೀಈನ್, ಪುಟ–483–484)

ಇದರ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಒಟ್ಟುಗೂಡಿಸಿ ಖುರೈಶಿಗಳು ದಾಳಿ ನಡೆಸುವುದರ ಕುರಿತು ಸಮಾಲೋಚನೆ ನಡೆಸಿದರು. ಮದೀನದಲ್ಲೇ ಇದ್ದುಕೊಂಡು ಅವರನ್ನು ಎದುರಿಸಬೇಕೇ? ಅಥವಾ ಮದೀನದ ಹೊರಗೆ ಹೋಗಿ ಹೋರಾಟ ನಡೆಸಬೇಕೇ ಎಂಬುದರ ಬಗ್ಗೆ ಅವರೊಡನೆ ಸಲಹೆ ಕೇಳಿದರು. ಸಮಾಲೋಚನೆಗೆ ಮುಂಚೆ ಹಝ್ರತ್ ಪೈಗಂಬರ್(ಸ) ಖುರೈಶಿಗಳ ದಾಳಿ ಮತ್ತು ಅವರ ದೌರ್ಜನ್ಯಕರವಾದ ಉದ್ದೇಶಗಳ ಕುರಿತು ಪ್ರಸ್ತಾಪಿಸಿದರು ಮತ್ತು ಹೀಗೆ ಹೇಳಿದರು: ನಾನು ನಿನ್ನೆ ರಾತ್ರಿ ಕನಸಿನಲ್ಲಿ ಒಂದು ದನವನ್ನು ಕಂಡೆನು. ಅದೇ ರೀತಿಯಲ್ಲಿ ನನ್ನ ಖಡ್ಗದ ಅಂಚು ತುಂಡಾಗಿರುವುದಾಗಿ ನಾನು ಕಂಡೆನು. ಅನಂತರ ಆ ದನ ಕೊಯ್ಯಲ್ಪಡುವುದಾಗಿ ನಾನು ಕಂಡೆನು. ನಾನು ನನ್ನ ಕೈಯನ್ನು ಒಂದು ಸುದೃಢ ಮತ್ತು ಸುರಕ್ಷಿತ ರಕ್ಷಾಕವಚದೊಳಗೆ ಇರಿಸಿದ್ದಾಗಿಯೂ ಕಂಡೆನು. ಮತ್ತೊಂದು ವರದಿಯಲ್ಲಿ ಹೀಗೆಯೂ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಒಂದು ಟಗರಿನ ಮೇಲೆ ಅಥವಾ ಒಂದು ದೊಡ್ಡ ಆಡಿನ ಬೆನ್ನ ಮೇಲೆ ನಾನು ಸವಾರನಾಗಿರುವುದನ್ನು ನಾನು ಕಂಡೆನು. ಈ ಕನಸಿಗೆ ಏನು ವ್ಯಾಖ್ಯಾನವನ್ನು ನೀಡಿದ್ದೀರಿ ಎಂದು ಸಹಾಬರು ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ದನ ಕೊಯ್ಯಲ್ಪಡುವುದರಿಂದ, ನನ್ನ ಸಹಾಬಿಯರಲ್ಲಿ ಕೆಲವರು ಹುತಾತ್ಮರಾಗುವರು ಎಂದು ನಾನು ಭಾವಿಸುತ್ತೇನೆ. ಖಡ್ಗದ ಅಂಚು ತುಂಡಾಗುವುದರಿಂದ ನನ್ನ ಸಂಬಂಧಿಕರಲ್ಲಿ ಯಾರಾದರೂ ಶಹೀದ್ ಆಗುವುದರ ಕಡೆಗೆ ಅದು ಸೂಚನೆ ನೀಡುತ್ತದೆ ಅಥವಾ ನನಗೆ ಸ್ವತಃ ಈ ಯುದ್ಧದಲ್ಲಿ ಏನಾದರೂ ತೊಂದರೆ ಉಂಟಾಗಬಹುದು. ರಕ್ಷಾಕವಚದೊಳಗೆ ಕೈಯನ್ನು ಹಾಕುವುದರಿಂದ ನಾನು ಮನವರಿಕೆ ಮಾಡುವುದೇನೆಂದರೆ, ಈ ದಾಳಿಯನ್ನು ಎದುರಿಸಲು ನಾವು ಮದೀನದ ಒಳಗೆ ಇರುವುದು ಹೆಚ್ಚು ಸಮಂಜಸವೆಂದು ತೋರುತ್ತದೆ. ಟಗರಿನ ಮೇಲೆ ಸವಾರರಾಗಿರುವುದರ ವ್ಯಾಖ್ಯಾನವನ್ನು ಹೀಗೆ ಮಾಡಿದರು: ಇದರಿಂದ ಸತ್ಯನಿಷೇಧಿಗಳ ಸರದಾರ, ಎಂದರೆ ಧ್ವಜವಾಹಕನನ್ನು ಉದ್ದೇಶಿಸಲಾಗಿದೆ. ಅವನು ಇನ್‌ಶಾ ಅಲ್ಲಾಹ್ ಮುಸ್ಲಿಮರ ಕೈಗಳಿಂದ ಕೊಲ್ಲಲ್ಪಡುವನು.

ಅನಂತರ ಈಗಿನ ಅವಸ್ಥೆಯಲ್ಲಿ ಏನು ಮಾಡಬೇಕೆಂಬುದರ ಕುರಿತು ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಸಲಹೆ ಕೇಳಿದರು. ಸ್ಥಿತಿಗತಿಗಳ ಏರುಕಮ್ಮಿಯ ಬಗ್ಗೆ ಯೋಚಿಸಿ ಮತ್ತು ಬಹುಶಃ ಹಝ್ರತ್ ಪೈಗಂಬರ್(ಸ)ರ ಕನಸಿನಿಂದ ಸ್ವಲ್ಪ ಮಟ್ಟಿಗೆ ಪ್ರಭಾವಿತರಾಗಿ ಮದೀನದಲ್ಲೇ ಇದ್ದುಕೊಂಡು ಹೋರಾಡುವುದು ಸರಿಯೆಂದು ಕೆಲವು ಸಹಾಬಿಯರು ಅಭಿಪ್ರಾಯಪಟ್ಟರು. ಹಝ್ರತ್ ಪೈಗಂಬರ್(ಸ) ಸಹ ಇದೇ ಅಭಿಪ್ರಾಯವನ್ನು ಇಷ್ಟಪಟ್ಟರು. ಮದೀನದಲ್ಲೇ ಇದ್ದುಕೊಂಡು ಹೋರಾಡುವುದು ಉತ್ತಮವೆಂದು ತೋರುತ್ತದೆ ಎಂದು ಹೇಳಿದರು. ಆದರೆ ಹೆಚ್ಚಿನ ಸಹಾಬಿಯರು ವಿಶೇಷವಾಗಿ ಬದ್ರ್ ಯುದ್ಧದಲ್ಲಿ ಭಾಗಿಯಾಗಿರದ ಮತ್ತು ತಮ್ಮ ಬಲಿದಾನದಿಂದ ದೀನಿನ ಸೇವೆಯ ಅವಕಾಶವನ್ನು ಸಂದರ್ಭವನ್ನು ಪಡೆಯಲಿಕ್ಕಾಗಿ ಉತ್ಸುಕರಾಗಿದ್ದ ಯುವಕರು ಒತ್ತಾಯದಿಂದ ಹೀಗೆ ಹೇಳಿದರು: ಪಟ್ಟಣದಿಂದ ಹೊರಗೆ ಹೋಗಿ ತೆರೆದ ಮೈದಾನದಲ್ಲಿ ಯುದ್ಧ ಮಾಡಬೇಕು. ಆ ಜನರು ಎಷ್ಟು ಒತ್ತಾಯದಿಂದ ತಮ್ಮ ಸಲಹೆಯನ್ನು ಕೊಟ್ಟರು ಎಂದರೆ ಹಝ್ರತ್ ಪೈಗಂಬರ್(ಸ) ಆ ಯುವಕರ ಆವೇಶವನ್ನು ನೋಡಿಕೊಂಡು ಅವರ ಮಾತನ್ನು ಅಂಗೀಕರಿಸಿದರು ಹಾಗೂ ನಾವು ತೆರೆದ ಮೈದಾನಕ್ಕೆ ಹೋಗಿ ಸತ್ಯನಿಷೇಧಿಗಳೊಂದಿಗೆ ಯುದ್ಧ ನಡೆಸುವೆವು ಎಂದು ತೀರ್ಮಾನಿಸಿದರು. ಅನಂತರ ಜುಮಾ ನಮಾಝಿನ ನಂತರ, ಅಲ್ಲಾಹನ ಮಾರ್ಗದಲ್ಲಿ ಕಠಿಣ

ಪ್ರಯತ್ನ ಮಾಡುವ ಸಲುವಾಗಿ ಈ ಯುದ್ಧದಲ್ಲಿ ಭಾಗವಹಿಸಿ ಪ್ರತಿಫಲವನ್ನು ಪಡೆಯಿರಿ ಎಂದು ಹಝ್ರತ್ ಪೈಗಂಬರ್(ಸ) ಸಾರ್ವಜನಿಕವಾಗಿ ಜನರನ್ನು ಹುರಿದುಂಬಿಸಿದರು. ಅನಂತರ ಅವರು ಮನೆಯ ಒಳಗೆ ಹೋದರು. ಅಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಸಹಾಯದಿಂದ ಹಝ್ರತ್ ಪೈಗಂಬರ್(ಸ) ಮುಂಡಾಸನ್ನು ಕಟ್ಟಿದರು, ಬಟ್ಟೆಯನ್ನು ಧರಿಸಿದರು ಮತ್ತು ಯುದ್ಧದ ಆಯುಧಗಳನ್ನು ಹೆಗಲಿಗೆ ಹಾಕಿಕೊಂಡು ಅಲ್ಲಾಹನ ಹೆಸರಿನಲ್ಲಿ ಹೊರಗೆ ಬಂದರು. ಆದರೆ ಅಷ್ಟರಲ್ಲಿ ಕೆಲವು ಸಹಾಬಿಯರು ತಿಳಿ ಹೇಳಿದ ಕಾರಣದಿಂದ ಯುವಕರಿಗೆ ತಮ್ಮ ತಪ್ಪಿನ ಅರಿವಾಯಿತು. ಹಝ್ರತ್ ಪೈಗಂಬರ್(ಸ)ರ ಅಭಿಪ್ರಾಯಕ್ಕೆ ವಿರುದ್ಧವಾಗಿ ತಮ್ಮ ಅಭಿಪ್ರಾಯವನ್ನು ಒತ್ತಾಯದಿಂದ ಹೇಳಬಾರದು ಎಂದು ಅವರಿಗೆ ಗೊತ್ತಾಯಿತು. ಈ ಅರಿವು ಆದಾಗ ಅವರಲ್ಲಿ ಹೆಚ್ಚಿನವರು ಲಜ್ಜಿತರಾದರು ಹಾಗೂ ಹಝ್ರತ್ ಪೈಗಂಬರ್(ಸ) ಆಯುಧಗಳನ್ನು ಹೆಗಲಲ್ಲಿ ಹಾಕಿಕೊಂಡು ಮತ್ತು ಎರಡು ಎರಡು ರಕ್ಷಾಕವಚಗಳು ಇತ್ಯಾದಿಗಳನ್ನು ಹಾಕಿಕೊಂಡು ಹೊರಗೆ ಬರುತ್ತಿರುವುದನ್ನು ಈ ಯುವಕರು ಕಂಡಾಗ ಅವರು ಇನ್ನೂ ಹೆಚ್ಚು ನಾಚಿಕೆಗೊಂಡರು. ಅವರೆಲ್ಲರೂ ಒಂದೇ ಸ್ವರದಲ್ಲಿ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಮ್ಮಿಂದ ತಪ್ಪಾಯಿತು. ನಾವು ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ನಮ್ಮ ಅಭಿಪ್ರಾಯದ ಮೇಲೆ ಒತ್ತಾಯ ಪಡಿಸಿದೆವು. ನೀವು ಯಾವುದನ್ನು ಸರಿಯೆಂದು ಭಾವಿಸುತ್ತೀರೋ ಅದರ ಪ್ರಕಾರ ನಡೆಯಿರಿ. ಇನ್‌ಶಾ ಅಲ್ಲಾಹ್, ಅದರಲ್ಲೇ ಅನುಗ್ರಹವಿದೆ.

ಹಝ್ರತ್ ಪೈಗಂಬರ್(ಸ) ಹೇಳಿದರು: ಆಯುಧಗಳನ್ನು ಹಾಕಿದ ನಂತರ ಅದನ್ನು ಕೆಳಗಿಳಿಸುವುದು ಅಲ್ಲಾಹನ ಪ್ರವಾದಿಯ ವೈಭವಕ್ಕೆ ಸೇರಿದಲ್ಲ. ಅಲ್ಲಾಹನು ಇದಕ್ಕೆ ವಿರುದ್ಧವಾಗಿ ಏನಾದರೂ ತೀರ್ಮಾನ ಮಾಡುವುದರ ಹೊರತು. ಆದ್ದರಿಂದ ಈಗ ಅಲ್ಲಾಹನ ಹೆಸರು ಉಚ್ಚರಿಸುತ್ತಾ ಮುಂದಕ್ಕೆ ಧಾವಿಸಿರಿ. ನೀವು ಸಹನೆಯಿಂದ ವರ್ತಿಸಿದರೆ, ಖಂಡಿತವಾಗಿಯೂ ಅಲ್ಲಾಹನ ಸಹಾಯ ನಿಮ್ಮೊಂದಿಗೆ ಇರುವುದು ಎಂದು ದೃಢವಾಗಿ ನಂಬಿರಿ.

ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಖಡ್ಗವನ್ನು ಕೈಯಲ್ಲಿ ತೆಗೆದುಕೊಂಡು, ಇದರ ಹಕ್ಕನ್ನು ಯಾರು ಈಡೇರಿಸುವರು ಎಂದು ಕೇಳಿದರು. ಆ ಖಡ್ಗವು ತಮಗೆ ಸಿಗಬೇಕೆಂದು ಬಯಸುತ್ತಿದ್ದ ಸಹಾಬಿಯರಲ್ಲಿ ಹಝ್ರತ್ ಅಬೂಬಕರ್(ರ) ಸಹ ಇದ್ದರು.
(ಶರಹ್ ಝುರ್‌ಖಾನಿ ಅಲಲ್ ಮವಾಹಿಬುದ್ದುನಿಯ, ಸಂಪುಟ–2, ಪುಟ–404, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದನ್ನು ಹೀಗೆ ಪ್ರಸ್ತಾಪಿಸಿರುವರು: ಹಝ್ರತ್ ಪೈಗಂಬರ್(ಸ) ತನ್ನ ಖಡ್ಗವನ್ನು ಕೈಯಲ್ಲಿ ಎತ್ತಿಕೊಂಡು ಹೀಗೆ ಹೇಳಿದರು: ಯಾರು ಇದನ್ನು ತೆಗೆದು ಇದರ ಹಕ್ಕನ್ನು ಈಡೇರಿಸುವರು? ಅನೇಕ ಸಹಾಬಿಯರು ಅದನ್ನು ಪಡೆಯುವ ಹಿರಿಮೆಯ ಬಯಕೆಯಿಂದ ತಮ್ಮ ಕೈಗಳನ್ನು ಚಾಚಿದರು. ಅವರಲ್ಲಿ ಹಝ್ರತ್ ಉಮರ್ ಮತ್ತು ಝುಬೇರ್ ಇದ್ದರು. ಮಾತ್ರವಲ್ಲ ವರದಿಗಳ ಪ್ರಕಾರ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಅಲಿ(ರ) ಸಹ ಇದ್ದರು. ಆದರೆ ಹಝ್ರತ್ ಪೈಗಂಬರ್(ಸ) ಅದನ್ನು ಕೈಯಲ್ಲಿ ಹಿಡಿದುಕೊಂಡೇ ಇದ್ದರು ಮತ್ತು ಹೀಗೆಯೇ ಹೇಳುತ್ತಿದ್ದರು: ಇದರ ಹಕ್ಕನ್ನು ಈಡೇರಿಸುವವರು ಯಾರಾದರೂ ಇದ್ದಾರೆಯೇ? ಕೊನೆಗೆ ಅಬೂದುಜಾನ ಅನ್ಸಾರಿ ತನ್ನ ಕೈಯನ್ನು ಚಾಚಿದರು ಮತ್ತು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನನಗೆ ಕೊಡಿರಿ. ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಅವರಿಗೆ ಕೊಟ್ಟರು.
(ಸೀರತ್ ಖಾತಮನ್ನಬೀಈನ್, ಪುಟ–489)

ಉಹದ್ ಯುದ್ಧದಲ್ಲಿ ಸತ್ಯನಿಷೇಧಿಗಳು ಹಿಂತಿರುಗಿ ಬಂದು ದಾಳಿ ನಡೆಸಿದಾಗ ಮತ್ತು ಮುಸ್ಲಿಮರಿಗೆ ಪರಾಜಯ ಎದುರಿಸಬೇಕಾಗಿ ಬಂದಾಗ ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ವದಂತಿ ಹರಡಿತು. ಹಝ್ರತ್ ಪೈಗಂಬರ್(ಸ)ರು ಶಹೀದ್ ಆದರು ಎಂಬ ಸುದ್ದಿ ಮತ್ತು ಕೆಲವು ಜನರು ಚದುರಿಹೋದ ಘಟನೆಯ ವಿವರಣೆಯ ನಂತರ ಇಬ್ನು ಇಸ್‌ಹಾಖ್ ಇದರ ಕುರಿತು ಹೇಳುತ್ತಾರೆ: ಮೊತ್ತ ಮೊದಲು ಹಝ್ರತ್ ಪೈಗಂಬರ್(ಸ) ಹಝ್ರತ್ ಕಅ್‌ಬ್ ಬಿನ್ ಮಾಲಿಕ್(ರ)ರನ್ನು ನೋಡಿದರು. ಹಝ್ರತ್ ಕಅ್‌ಬ್(ರ) ಹೇಳುತ್ತಾರೆ: ತಲೆಕವಚದೊಳಗೆ ನಾನು ಹಝ್ರತ್ ಪೈಗಂಬರ್(ಸ)ರ ಬೆಳಗುವ ಕಣ್ಣುಗಳನ್ನು ನೋಡಿದಾಗ ನಾನು ಉಚ್ಚಸ್ವರದಲ್ಲಿ ಹೀಗೆ ಕೂಗಿದೆ: ಎಲೈ ಮುಸ್ಲಿಮರೇ, ಸಂತೋಷಗೊಳ್ಳಿರಿ, ಇಲ್ಲಿ ಹಝ್ರತ್ ಪೈಗಂಬರ್(ಸ) ಇರುವರು. ಇದನ್ನು ಕೇಳಿ ಹಝ್ರತ್ ಪೈಗಂಬರ್(ಸ) ಕೈ ಸನ್ನೆ ಮಾಡಿ ನನ್ನೊಡನೆ ಸುಮ್ಮನಿರಲು ಹೇಳಿದರು. ಮುಸ್ಲಿಮರು ಹಝ್ರತ್ ಪೈಗಂಬರ್(ಸ)ರ ಗುರುತು ಸಿಕ್ಕಿದಾಗ, ಹಝ್ರತ್ ಪೈಗಂಬರ್(ಸ) ಅವರ ಜೊತೆಗೆ ಕಣಿವೆಯ ಕಡೆಗೆ ರವಾನೆಯಾದರು. ಹಝ್ರತ್ ಪೈಗಂಬರ್(ಸ)ರೊಂದಿಗೆ ಹಝ್ರತ್ ಅಬೂಬಕರ್ ಸಿದ್ದೀಖ್(ರ), ಹಝ್ರತ್ ಉಮರ್(ರ), ಹಝ್ರತ್ ಅಲಿ(ರ), ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ), ಹಝ್ರತ್ ಝುಬೇರ್ ಬಿನ್ ಅವಾಮ್(ರ), ಹಝ್ರತ್ ಹಾರಿಸ(ರ) ಮುಂತಾದ ಸಹಾಬಿಯರು ಇದ್ದರು. (ತಾರೀಖ್ ಅತ್ತಿಬರಿ ಲಿಅಬಿ ಜಅ್‌ಫರ್ ಮುಹಮ್ಮದ್ ಜರೀರ್ ಬಿನ್ ತಬರಿ, ಸಂಪುಟ–3, ಪುಟ–70, ದಾರುಲ್ ಫಿಕರ್ ಬೈರೂತ್ 2002)

ಹಝ್ರತ್ ಪೈಗಂಬರ್(ಸ) ಉಹದ್ ದಿನದಂದು ಮರಣಕ್ಕೂ ಸಿದ್ಧರಾಗಿದ್ದೇವೆ ಎಂಬುವುದಾಗಿ ತನ್ನ ಸಹಾಬಿಯರ ಒಂದು ಸಂಘದಿಂದ ಬೈಅತ್ ಪ್ರತಿಜ್ಞೆ ಪಡೆದರು. ಆ ಸಮಯದಲ್ಲಿ ಮುಸ್ಲಿಮರು ಬಾಹ್ಯವಾಗಿ ನೋಡುವುದಾದರೆ, ಪರಾಜಿತಗೊಂಡಿದ್ದರು. ಆದರೂ ಅವರು ಸ್ಥೈರ್ಯದಿಂದ ಇದ್ದರು ಮತ್ತು ತಮ್ಮ ಜೀವದ ಹಂಗು ತೊರೆದು ಹಝ್ರತ್ ಪೈಗಂಬರ್(ಸ)ರನ್ನು ಸಂರಕ್ಷಿಸುತ್ತಿದ್ದರು. ಎಲ್ಲಿಯ ವರೆಗೆ ಎಂದರೆ, ಅವರಲ್ಲಿ ಕೆಲವರು ಶಹೀದ್ ಆದರು. ಈ ರೀತಿಯಾಗಿ ಬೈಅತ್ ಮಾಡಿದ ಸೌಭಾಗ್ಯಶಾಲಿಗಳಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ತಲ್‌ಹ(ರ), ಹಝ್ರತ್ ಝುಬೇರ್(ರ), ಹಝ್ರತ್ ಸಅದ್(ರ), ಹಝ್ರತ್ ಸಅದ್(ರ), ಹಝ್ರತ್ ಸಹಲ್ ಬಿನ್ ಹನೀಫ್ ಮತ್ತು ಹಝ್ರತ್ ದುಜಾನ(ರ) ಸೇರಿದ್ದರು.
(ಅಲ್‌ಅಸಾಬ, ಭಾಗ–3, ಪುಟ–431, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಉಹದ್ ಯುದ್ಧದ ಅವಸ್ಥೆಯ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೀಗೆ ಬರೆದಿರುವರು: ಹಝ್ರತ್ ಪೈಗಂಬರ್(ಸ)ರ ಸುತ್ತ ಇದ್ದ ಸಹಾಬಿಯರು ತೋರಿಸಿದ ತ್ಯಾಗಗಳಂತಹ ಬೇರೆ ಉದಾಹರಣೆಗಳು ಚರಿತ್ರೆಯಲ್ಲಿ ಕಾಣಲು ಸಾಧ್ಯವಿಲ್ಲ. ಈ ಜನರು ಚಿಟ್ಟೆಯಂತೆ ಹಝ್ರತ್ ಪೈಗಂಬರ್(ಸ)ರ ಆಸುಪಾಸಿನಲ್ಲಿ ಸುತ್ತುತ್ತಿದ್ದರು. ಹಝ್ರತ್ ಪೈಗಂಬರ್(ಸ)ರಿಗಾಗಿ ತಮ್ಮ ಜೀವಗಳೊಂದಿಗೆ ಆಟವಾಡುತ್ತಿದ್ದರು. ಎದುರಾಗಿ ಬರುವ ಪ್ರತಿಯೊಂದು ಹಲ್ಲೆಯನ್ನು ತನ್ನ ಮೇಲೆ ಬರುವಂತೆ ಮಾಡುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ರಕ್ಷಿಸುತ್ತಿದ್ದರು. ಅದರೊಂದಿಗೆ ಶತ್ರುಗಳ ಮೇಲೂ ದಾಳಿ ನಡೆಸುತ್ತಿದ್ದರು. ಹಝ್ರತ್ ಅಲಿ(ರ) ಮತ್ತು ಝುಬೇರ್(ರ) ಮನಬಂದಂತೆ ಶತ್ರುಗಳ ಮೇಲೆ ದಾಳಿ ನಡೆಸಿದರು. ಅವರ ಪಂಕ್ತಿಗಳನ್ನು ನೂಕುತ್ತಾ ಹೋದರು. ಅಬುತಲ್‌ಹ ಅನ್ಸಾರಿ ಬಾಣ ಬೀಸುತ್ತಾ ಬೀಸುತ್ತಾ ಅವರ ಮೂರು ಬಿಲ್ಲುಗಳು ತುಂಡಾದುವು. ಶತ್ರುಗಳ ಬಾಣಗಳ ವಿರುದ್ಧ ಎದೆಯೆತ್ತಿ ನಿಂತುಕೊಂಡು ಹಝ್ರತ್ ಪೈಗಂಬರ್(ಸ)ರ ಶರೀರವನ್ನು ತನ್ನ ರಕ್ಷಾಕವಚದಿಂದ ಅಡಗಿಸಿದರು. ಸಅದ್ ಬಿನ್ ವಖಾಸ್(ರ)ರಿಗೆ ಹಝ್ರತ್ ಪೈಗಂಬರ್(ಸ) ಸ್ವತಃ ಬಾಣಗಳನ್ನು ಕೊಡುತ್ತಿದ್ದರು. ಸಅದ್ ಆ ಬಾಣಗಳನ್ನು ಶತ್ರುಗಳ ಮೇಲೆ ಮನಬಂದಂತೆ ಚಲಾಯಿಸುತ್ತಿದ್ದರು. ಒಂದು ಬಾರಿ ಹಝ್ರತ್ ಪೈಗಂಬರ್(ಸ) ಸಅದ್‌ರೊಡನೆ ಹೇಳಿದರು: ನಿನ್ನ ಮೇಲೆ ನನ್ನ ತಂದೆ ತಾಯಂದಿರು ಅರ್ಪಣೆಗೊಳ್ಳಲಿ. ನೀನು ನಿರಂತರವಾಗಿ ಬಾಣಗಳನ್ನು ತೂರುತ್ತಾ ಹೋಗು. ಸಅದ್(ರ) ತನ್ನ ಮರಣದ ವರೆಗೂ ಹಝ್ರತ್ ಪೈಗಂಬರ್(ಸ)ರ ಈ ಪದಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಅಬೂದುಜಾನ ಬಹಳ ಹೊತ್ತು ಹಝ್ರತ್ ಪೈಗಂಬರ್(ಸ)ರ ದೇಹವನ್ನು ತನ್ನ ದೇಹದಿಂದ ಅಡಗಿಸುತ್ತಿದ್ದರು. ಮುಂದಿನಿಂದ ಬರುತ್ತಿದ್ದ ಬಾಣ ಅಥವಾ ಕಲ್ಲನ್ನು ತನ್ನ ದೇಹದಿಂದ ತಡೆಯುತ್ತಿದ್ದರು. ಎಲ್ಲಿಯ ವರೆಗೆ ಎಂದರೆ, ಅವರ ಶರೀರ ಬಾಣಗಳಿಂದ ಜರ್ಜಿತಗೊಂಡಿತು. ಆದರೂ ಅವರ ನಾಲಗೆಯಿಂದ ನೋವನ್ನು ವ್ಯಕ್ತಪಡಿಸುವಂತಹ ಪದಗಳು ಹೊರಡಲಿಲ್ಲ. ತನ್ನ ದೇಹವನ್ನು ಅಲುಗಾಡಿಸುವುದರಿಂದ ಹಿಂದೆ ಇರುವ ಹಝ್ರತ್ ಪೈಗಂಬರ್(ಸ)ರ ದೇಹಕ್ಕೆ ಯಾವುದಾದರೂ ಬಾಣ ತಗುಲದಿರಲಿಕ್ಕಾಗಿ ಅವರು ಹೀಗೆ ಅಲುಗಾಡದೇ ಏನೂ ಉಚ್ಚರಿಸದೇ ನಿಂತಿದ್ದರು. ತಲ್‌ಹ(ರ) ಹಝ್ರತ್ ಪೈಗಂಬರ್(ಸ)ರನ್ನು ರಕ್ಷಿಸಲಿಕ್ಕಾಗಿ ಮುಂದಿನಿಂದ ಬರುತ್ತಿದ್ದ ಅನೇಕ ಹಲ್ಲೆಗಳನ್ನು ತನ್ನ ದೇಹದಿಂದ ತಡೆಯುತ್ತಿದ್ದರು. ಇದೇ ಪ್ರಯತ್ನದಲ್ಲಿ ಅವರ ಕೈ ಜೋಮು ಹಿಡಿದು ಮರಗಟ್ಟಿ ಸದಾ ಕಾಲಕ್ಕೆ ನಿಷ್ಕ್ರೀಯವಾಯಿತು. ಉಪಯೋಗಶೂನ್ಯವಾಯಿತು. ಆದರೆ ಬೆರಳೆಣಿಕೆಯ ತ್ಯಾಗಶಾಲಿಗಳು ಈ ಮಹಾ ಪ್ರವಾಹವನ್ನು ಎಲ್ಲಿಯ ತನಕ ತಡೆಯಬಹುದಾಗಿತ್ತು. ಅದು ಭಯಾನಕವಾದ ಅಲೆಗಳಂತೆ ನಾಲ್ಕೂ ಕಡೆಗಳಿಂದಲೂ ಮುಂದಕ್ಕೆ ಬರುತ್ತಿದ್ದುವು. ಶತ್ರುಗಳ ಪ್ರತಿಯೊಂದು ದಾಳಿಯ ಪ್ರತಿಯೊಂದು ಅಲೆ ಮುಸ್ಲಿಮರನ್ನು ಎಲ್ಲಿಂದೆಲ್ಲಿಗೋ ಕೊಂಡುಹೋಗುತ್ತಿತ್ತು. ಆದರೆ ಅದರ ಶಕ್ತಿ ಸ್ವಲ್ಪ ಕುಂಠಿತಗೊಳ್ಳುವಾಗ ಮುಸ್ಲಿಮರು ಹೋರಾಡುತ್ತಾ ಪುನಃ ತನ್ನ ಪ್ರಿಯ ಯಜಮಾನನ ಸುತ್ತ ಒಟ್ಟುಗೂಡುತ್ತಿದ್ದರು. ಕೆಲವೊಮ್ಮೆ

ಎಷ್ಟು ಅಪಾಯಕರವಾದ ಆಕ್ರಮಣ ನಡೆಯುತ್ತಿತ್ತು ಎಂದರೆ, ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗುತ್ತಿದ್ದರು. ಕೊನೆಗೆ ಒಂದು ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಸುತ್ತ ಕೇವಲ 12 ಜನರು ಇದ್ದರು. ಮತ್ತೊಂದು ಘಳಿಗೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಸುತ್ತ ಕೇವಲ ಇಬ್ಬರು ವ್ಯಕ್ತಿಗಳಿದ್ದರು. ಈ ತ್ಯಾಗಶಾಲಿಗಳಲ್ಲಿ ಹಝ್ರತ್ ಅಬೂಬಕರ್(ರ), ಅಲಿ(ರ), ತಲ್‌ಹ(ರ), ಝುಬೇರ್(ರ), ಸಅದ್ ಬಿನ್ ವಖಾಸ್(ರ), ಅಬೂದುಜಾನ ಅನ್ಸಾರಿ(ರ), ಸಅದ್ ಬಿನ್ ಮುಆಧ್(ರ) ಮತ್ತು ತಲ್‌ಹ ಅನ್ಸಾರಿ(ರ)ರ ಹೆಸರುಗಳು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ.
(ಸೀರತ್ ಖಾತಮನ್ನಬೀಈನ್, ಪುಟ-495-496)

ಉಹದ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ)ರ ಹಲ್ಲುಗಳು ಮುರಿದು ಹೋಗಿದ್ದುವು. ಆ ಸಮಯದ ಬಗ್ಗೆ ಹಝ್ರತ್ ಅಬೂಬಕರ್(ರ) ಹೇಳಿದ್ದನ್ನು ಹಝ್ರತ್ ಆಯಿಶ(ರ) ಹೀಗೆ ವರದಿ ಮಾಡಿದ್ದಾರೆ: ಉಹದ್ ದಿನದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ಆ ದಿನ ಸಂಪೂರ್ಣವಾಗಿಯೂ ತಲ್‌ಹರವರದ್ದಾಗಿತ್ತು. ಉಹದ್ ದಿನದಂದು ಮರಳಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದ ಜನರಲ್ಲಿ ನಾನೂ ಒಬ್ಬನಾಗಿದ್ದೆ. ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಅವರನ್ನು ಸಂರಕ್ಷಿಸುತ್ತಾ ಹೋರಾಡುವುದನ್ನು ನಾನು ಕಂಡೆನು. ಅವರು ಹಝ್ರತ್ ಪೈಗಂಬರ್(ಸ)ರನ್ನು ರಕ್ಷಿಸುತ್ತಿದ್ದರು. ಅವರು ತಲ್‌ಹ ಆಗಿರಬೇಕು ಎಂದು ನಾನು ಬಯಸುತ್ತಿದ್ದೆ. ನನಗೆ ಅದರ ಸಂದರ್ಭ ಸಿಗಲಿಲ್ಲ. ಆದರೆ ನನ್ನ ಸಮುದಾಯದಿಂದ ಒಬ್ಬ ವ್ಯಕ್ತಿ ಆಗಿದ್ದರೆ ಒಳ್ಳೆಯದಾಗಿತ್ತು ಎಂದು ಯೋಚಿಸುತ್ತಿದ್ದೆ. ನನ್ನ ಮತ್ತು ಹಝ್ರತ್ ಪೈಗಂಬರ್(ಸ)ರ ನಡುವೆ ಒಬ್ಬ ವ್ಯಕ್ತಿಯಿದ್ದರು. ನನಗೆ ಅವರ ಗುರುತು ಸಿಗಲಿಲ್ಲ. ಸತ್ಯದಲ್ಲಿ ನಾನು ಆ ವ್ಯಕ್ತಿಗಿಂತ ಹೆಚ್ಚು ಹಝ್ರತ್ ಪೈಗಂಬರ್(ಸ)ರಿಗೆ ಸಾಮಿಪ್ಯವುಳ್ಳವನಾಗಿದ್ದೆ. ಆದರೆ ಆ ವ್ಯಕ್ತಿ ಹೋಗುವಷ್ಟು ವೇಗವಾಗಿ ನನಗೆ ಹೋಗಲು ಆಗುತ್ತಿರಲಿಲ್ಲ. ನೋಡಿದಾಗ ಅವರು ಅಬೂಉಬೈದ ಬಿನ್ ಜರಾಹ್(ರ) ಆಗಿದ್ದರು. ಅನಂತರ ನಾನು ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ಹೋದೆನು. ಹಝ್ರತ್ ಪೈಗಂಬರ್(ಸ)ರ ಮುಂದಿನ ಎರಡು ಹಲ್ಲುಗಳು ಮುರಿದಿದ್ದುವು ಮತ್ತು ಮುಖ ಗಾಯಗೊಂಡಿತ್ತು. ಅವರ ಅನುಗ್ರಹೀತ ಮುಖದಲ್ಲಿ ತಲೆಕವಚದ ಲೋಹದ ಮುಳ್ಳುಗಳು ಅಥವಾ ಆಣಿಗಳು ನುಗ್ಗಿದ್ದುವು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವಿಬ್ಬರೂ ನಮ್ಮ ಸಂಗಡಿಗನಿಗೆ ನೆರವಾಗಿರಿ. ಅವರು ತಲ್‌ಹರ ಬಗ್ಗೆ ಹೇಳುತ್ತಿದ್ದರು. ಅವರ ದೇಹದಿಂದ ಬಹಳ ರಕ್ತ ಹರಿಯುತ್ತಿತ್ತು. ಹಝ್ರತ್ ಪೈಗಂಬರ್(ಸ) ತನ್ನನ್ನು ನೋಡಲು ಮತ್ತು ತನ್ನ ಶೂಶ್ರೂಷೆ ನಡೆಸಲು ಹೇಳುವುದಕ್ಕೆ ಬದಲಾಗಿ ತಲ್‌ಹರ ಬಳಿಗೆ ಹೋಗಲು ಮತ್ತು ಅವರ ಬಗ್ಗೆ ಕಾಳಜಿ ವಹಿಸಲು ಹೇಳಿದರು. ಆದರೆ ನಾವು ಹಝ್ರತ್ ತಲ್‌ಹರನ್ನು ಬಿಟ್ಟುಬಿಟ್ಟೆವು. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಮುಖದಲ್ಲಿ ಹೂತುಹೋಗಿದ್ದ ತಲೆಕವಚವನ್ನು ಎಳೆಯಲು ನಾನು ಮುಂದಕ್ಕೆ ಧಾವಿಸಿದೆ. ಆಗ ಹಝ್ರತ್ ಅಬೂಉಬೈದ(ರ) ಹೇಳಿದರು: ನಾನು ನನ್ನ ಹಕ್ಕಿನ ಆಣೆ ಹಾಕಿ ಹೇಳುತ್ತೇನೆ. ಈ ಕೆಲಸವನ್ನು ನನಗೆ ಬಿಟ್ಟುಕೊಡಿರಿ. ಹೀಗೆ ನಾನು ಬಿಟ್ಟುಬಿಟ್ಟೆ. ಹಝ್ರತ್ ಪೈಗಂಬರ್(ಸ)ರಿಗೆ ನೋವಾಗಬಹುದು ಎಂಬ ಕಾರಣದಿಂದ ತಲೆಕವಚವನ್ನು ತನ್ನ ಕೈಗಳಿಂದ ತೆಗೆಯುವುದನ್ನು ಅಬೂಉಬೈದ ಇಷ್ಟಪಡಲಿಲ್ಲ. ಬದಲಾಗಿ ಅಬೂಉಬೈದ(ರ) ಆ ಮುಳ್ಳುಗಳನ್ನು ತನ್ನ ಬಾಯಿಯಿಂದ ಕಿತ್ತುಕೊಳ್ಳಲು ಪ್ರಯತ್ನಿಸಿದರು. ಅದರ ಒಂದು ಆಣಿಯನ್ನು ತೆಗೆದಾಗ ಅವರ ಮುಂದಿನ ಒಂದು ಹಲ್ಲು ಮುರಿದುಹೋಯಿತು. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ಎರಡನೇ ಆಣಿಯನ್ನು ಅಬೂಉಬೈದ ತೆಗೆದ ಅದೇ ರೀತಿಯಲ್ಲಿ ಹೊರತೆಗೆಯಲಿಕ್ಕಾಗಿ ನಾನು ಮುಂದಕ್ಕೆ ಧಾವಿಸಿದಾಗ ಅವರು ಪುನಃ ಹೇಳಿದರು: ನಾನು ನನ್ನ ಹಕ್ಕಿನ ಆಣೆ ಹಾಕಿ ಹೇಳುತ್ತೇನೆ. ಈ ಕೆಲಸವನ್ನು ನನಗೆ ಬಿಟ್ಟುಬಿಡಿರಿ. ಆಗ ನಾನು ಹಿಂದಕ್ಕೆ ಸರಿದೆ. ಆಗ ಅಬೂಉಬೈದ ಮೊದಲು ಮಾಡಿದಂತೆ ಪುನಃ ಮಾಡಿದರು. ಹೀಗೆ ಅವರ ಎರಡನೇ ಹಲ್ಲು ಕೂಡ ಮುರಿದು ಹೋಯಿತು. ಮುಂದಿನ ಹಲ್ಲುಗಳು ಮುರಿದು ಹೋದ ಜನರಲ್ಲಿ ಅವರು ಅತ್ಯಂತ ಸುಂದರರಾಗಿದ್ದರು.

ಅನಂತರ ನಾವು ಹಝ್ರತ್ ಪೈಗಂಬರ್(ಸ)ರ ಚಿಕಿತ್ಸೆಯನ್ನು ಮಾಡಿದ ನಂತರ ಹಝ್ರತ್ ತಲ್‌ಹರ ಬಳಿಗೆ ಬಂದೆವು. ಅವರು ಒಂದು ಹೊಂಡದಲ್ಲಿದ್ದರು. ನೋಡಿದಾಗ ಅವರ ದೇಹದಲ್ಲಿ ಈಟಿಗಳ, ಖಡ್ಗಗಳ ಮತ್ತು ಬಾಣಗಳ ಕನಿಷ್ಠ 70 ಗಾಯಗಳಿದ್ದುವು. ಅವರ ಬೆರಳು ಸಹ ತುಂಡಾಗಿತ್ತು. ಹೀಗೆ ನಾವು ಅವರ ಗಾಯಕ್ಕೆ ಮುಲಾಮು ಹಚ್ಚಿ ಪಟ್ಟಿಕಟ್ಟಿದೆವು. (ಸಬ್ಲುಲ್ ಹುದಾ, ಸಂಪುಟ-4, ಪುಟ-199-200, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಲುಗ್ಹಾತುಲ್ ಹದೀಸ್, ಕುತುಬ್ ಲಾಹೋರ್ 2005)

ಹಝ್ರತ್ ಅಬೂಉಬೈದ(ರ) ಅಲ್ಲದೇ ಹಝ್ರತ್ ಉಖ್‌ಬ ಬಿನ್ ವಹಬ್(ರ) ಮತ್ತು ಹಝ್ರತ್ ಅಬೂಬಕರ್(ರ) ಪೈಗಂಬರ್(ಸ)ರ ಮುಖದೊಳಗೆ ಹೂತುಹೋಗಿದ್ದ ಲೋಹದ ಮುಳ್ಳುಗಳನ್ನು ಹೊರತೆಗೆದರು ಎಂದೂ ವರದಿಗಳಲ್ಲಿ ಬಂದಿವೆ. ಆದರೆ ಮೊದಲು ಪ್ರಸ್ತಾಪಿಸಿದ ವರದಿ ಹೆಚ್ಚು ಪ್ರಬಲ. ಉಹದ್ ಯುದ್ಧದ ದಿನದಂದು ಹಝ್ರತ್ ಪೈಗಂಬರ್(ಸ) ಸಹಾಬಿಯರ ಜೊತೆಗೆ ಪರ್ವತವನ್ನೇರಿದಾಗ ಸತ್ಯನಿಷೇಧಿಗಳು ಸಹ ಅವರ ಹಿಂದೆ ಬಂದರು. ಸಹೀಹ್ ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಅಬೂಸುಫ್‌ಯಾನ್ ಮೂರು ಬಾರಿ ಕೂಗಿ ಕೇಳಿದನು: ಅವರಲ್ಲಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಇರುವರೋ? ಹಝ್ರತ್ ಪೈಗಂಬರ್(ಸ) ಸಹಾಬರನ್ನು ಜವಾಬು ಕೊಡುವುದರಿಂದ ತಡೆದಿದ್ದರು. ಅನಂತರ ಅಬೂಸುಫ್‌ಯಾನ್ ಮೂರು ಬಾರಿ ಕೂಗಿ ಕೇಳಿದನು: ಜನರಲ್ಲಿ ಅಬೂಖಹಫನ ಮಗನಾದ ಅಬೂಬಕರ್ ಇದ್ದಾರೆಯೇ? ಜನರಲ್ಲಿ ಇಬ್ನು ಖತ್ತಾಬ್‌ರಾದ ಉಮರ್ ಇರುವರೋ ಎಂದು ಮೂರು ಬಾರಿ ಕೇಳಿದನು. ಅನಂತರ ಅವನು ತನ್ನ ಸಂಗಡಿಗರ ಕಡೆಗೆ ಮರಳಿಹೋದನು ಮತ್ತು ಹೀಗೆ ಹೇಳಿದನು: ಇವರೆಲ್ಲರೂ ಕೊಲ್ಲಲ್ಪಟ್ಟಿರುವರು. ಇದನ್ನು ಕೇಳಿ ಹಝ್ರತ್ ಉಮರ್(ರ)ರಿಗೆ ಸಹಿಸಲು ಸಾಧ್ಯವಾಗಲಿಲ್ಲ. ಅವರು ಹೇಳಿದರು: ಎಲೈ ಅಲ್ಲಾಹನ ಶತ್ರು, ನೀನು ಸುಳ್ಳು ಹೇಳುತ್ತಿದ್ದೀಯ. ನೀನು ಹೆಸರು ಹೇಳಿದ ಎಲ್ಲರೂ ಜೀವಂತವಾಗಿರುವರು. ನಿನಗೆ ಇಷ್ಟವಿಲ್ಲದ ಅನೇಕ ಸಂಗತಿಗಳು ಈಗಲೂ ಬಾಕಿಯಾಗಿ ಉಳಿದಿವೆ.

ಹಝ್ರತ್ ಪೈಗಂಬರ್(ಸ) ಗಾಯಗೊಂಡು ಪ್ರಜ್ಞೆತಪ್ಪಿದ ಬಗ್ಗೆ ಮತ್ತು ಅದರ ನಂತರದ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸ್ವಲ್ಪ ಸಮಯದ ನಂತರ ಹಝ್ರತ್ ಪೈಗಂಬರ್(ಸ)ರ ಪ್ರಜ್ಞೆ ಮರಳಿ ಬಂದು ಎಚ್ಚರಗೊಂಡರು. ಮುಸ್ಲಿಮರು ಪುನಃ ಒಟ್ಟುಗೂಡಬೇಕೆಂದು ಹೇಳಲಿಕ್ಕಾಗಿ ಸಹಾಬಿಯರು ಕೆಲವು ಜನರನ್ನು ನಾಲ್ಕೂ ದಿಕ್ಕುಗಳಿಗೆ ಕಳುಹಿಸಿದರು. ಓಡಿಹೋಗಿದ್ದ ಸೈನ್ಯ ಪುನಃ ಒಟ್ಟು ಸೇರಲು ಶುರುವಾಯಿತು. ಹಝ್ರತ್ ಪೈಗಂಬರ್(ಸ) ಅವರನ್ನು ಕರೆದುಕೊಂಡು ಪರ್ವತದ ಬಳಿಗೆ ಕೊಂಡುಹೋದರು. ಪರ್ವತದ ಕೆಳಗೆ ಉಳಿದ ಅಲ್ಪಸ್ವಲ್ಪ ಸೈನ್ಯ ನಿಂತಿದಾಗ ಅಬೂಸುಫ್‌ಯಾನ್ ಬಹಳ ಉಚ್ಚ ಸ್ವರದಿಂದ ಹೀಗೆ ಹೇಳಿದನು: ನಾವು ಮುಹಮ್ಮದ್‌ದನ್ನು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ವಧಿಸಿದೆವು. ಶತ್ರುಗಳು ನೈಜ ಸ್ಥಿತಿಯ ಅರಿವಾಗಿ ದಾಳಿ ಮಾಡದಿರಲಿಕ್ಕಾಗಿ ಮತ್ತು ಗಾಯಾಳು ಮುಸ್ಲಿಮರು ಪುನಃ ಆಕ್ರಮಣಕ್ಕೆ ಗುರಿಯಾಗದಿರಲಿಕ್ಕಾಗಿ ಅಬೂಸುಫ್ಯಾನನ ಮಾತಿಗೆ ಜವಾಬು ಕೊಡುವುದರಿಂದ ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ತಡೆದರು. ಅಬುಸುಫ್ಯಾನಿನ ಮಾತಿಗೆ ಯಾವುದೇ ಜವಾಬು ಸಿಗದಿದ್ದಾಗ ಅವನ ಭಾವನೆ ಸರಿಯೆಂದು ಅವನಿಗೆ ದೃಢವಿಶ್ವಾಸವಾಯಿತು. ಅವನು ಬಹಳ ಉಚ್ಚಸ್ವರದಲ್ಲಿ, ನಾವು ಅಬೂಬಕರ್‌ರನ್ನೂ ವಧಿಸಿದೆವು ಎಂದು ಹೇಳಿದನು. ಯಾವುದೇ ಜವಾಬು ನೀಡದಿರಲು ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರೊಡನೆಯೂ ಹೇಳಿದ್ದರು. ಅನಂತರ ಅಬುಸುಫ್‌ಯಾನ್ ಉಚ್ಚಸ್ವರದಲ್ಲಿ, ನಾವು ಉಮರ್‌ರನ್ನೂ ವಧಿಸಿದೆವು ಎಂದು ಹೇಳಿದನು. ಆಗ ಬಹಳ ಆವೇಶಭರಿತ ವ್ಯಕ್ತಿಯಾಗಿದ್ದ ಹಝ್ರತ್ ಉಮರ್(ರ) ಹೀಗೆ ಉತ್ತರಿಸಲು ಬಯಸಿದ್ದರು: ನಾವು ಅಲ್ಲಾಹನ ಅನುಗ್ರಹದಿಂದ ಜೀವಂತವಾಗಿದ್ದೇವೆ. ನಿಮ್ಮನ್ನು ಎದುರಿಸಲು ತಯಾರಿದ್ದೇವೆ. ಆದರೆ ಮುಸ್ಲಿಮರನ್ನು ತೊಂದರೆಗೆ ಸಿಲುಕಿಸದಿರಲಿಕ್ಕಾಗಿ ಸುಮ್ಮನಿರಲು ಅವರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಆಗ ಇಸ್ಲಾಮಿನ ಸ್ಥಾಪಕರನ್ನೂ ಅವರ ಬಲ ಮತ್ತು ಎಡ ತೋಳುಗಳಾದ ಇಬ್ಬರನ್ನೂ ವಧಿಸಿದ್ದೇವೆ ಎಂದು ಸತ್ಯನಿಷೇಧಿಗಳಿಗೆ ದೃಢವಿಶ್ವಾಸವಾಯಿತು. ಆಗ ಅಬುಸುಫ್‌ಯಾನ್ ಮತ್ತು ಅವನ ಜೊತೆಗಾರರು ಸಂತೋಷದಿಂದ ಹೀಗೆ ಘೋಷಣೆ ಕೂಗಿದರು. **ಉಹ್‌ಲುಲ್ ಹುಬಲ್, ಉಹ್‌ಲುಲ್ ಹುಬಲ್,** ನಮ್ಮ ಗೌರವಾನ್ವಿತ ವಿಗ್ರಹವಾದ ಹುಬಲಿನಿಗೆ ಜೈಕಾರ. ಅವನು ಇಂದು ಇಸ್ಲಾಮನ್ನು ಕೊನೆಗೊಳಿಸಿದನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಗಾಯಾಳುವಾದ ಮುಸ್ಲಿಮರ ಮೇಲೆ ಪುನಃ ಸತ್ಯನಿಷೇಧಿಗಳು ದಾಳಿ ನಡೆಸಿ ಬೆರಳೆಣಿಕೆಯಷ್ಟು ಇರುವ ಮುಸ್ಲಿಮರು ಅವರ ಕೈಗಳಿಂದ ಶಹೀದ್ ಆಗದಿರಲಿಕ್ಕಾಗಿ ತನ್ನ ಮರಣದ ಘೋಷಣೆ ಮಾಡಲಾದಾಗಲೂ ಅಬೂಬಕರ್‌ರ ಮರಣದ ಘೋಷಣೆ ಕೂಗಿದಾಗಲೂ ಉಮರ್‌ರ ಮರಣವನ್ನು ಘೋಷಿಸುವಾಗಲೂ ಸುಮ್ಮನಿರಲು ಉಪದೇಶಿಸಿದ ಹಝ್ರತ್ ಪೈಗಂಬರ್(ಸ) ಅವರೇ ಏಕದೇವನಾದ ಅಲ್ಲಾಹನ ಗೌರವದ ಪ್ರಶ್ನೆ ಎದ್ದಾಗ ಮತ್ತು ಶಿರ್ಕಿನ ಘೋಷಣೆ ಮೈದಾನದಲ್ಲಿ ಹಾಕಲಾದಾಗ ಅವರ ಆತ್ಮ ಅಸಮಾಧಾನಗೊಂಡಿತು. ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಸಹಾಬಿಯರ ಕಡೆಗೆ ನೋಡಿಕೊಂಡು ಕೇಳಿದರು: ನೀವೇಕೆ

ಉತ್ತರ ಕೊಡುತ್ತಿಲ್ಲ? ಸಹಾಬಿಯರು ಕೇಳಿದರು: ಯಾ ರಸೂಲಲ್ಲಾಹ್ ನಾವೇನು ಉತ್ತರಿಸಬೇಕು? ಹಝ್ರತ್ ಪೈಗಂಬರ್(ಸ) ಹೇಳಿದರು: **ಅಲ್ಲಾಹು ಅಅ್‌ಲಾ ವ ಅಜಲ್ಲ್. ಅಲ್ಲಾಹು ಅಅ್‌ಲಾ ವಅಜಲ್ಲ್** ಎಂದು ಹೇಳಿರಿ. ನೀವು ಸುಳ್ಳು ಹೇಳುತ್ತಿದ್ದೀರಿ. ಹುಬಲಿನ ವೈಭವ ಉನ್ನತಗೊಂಡಿದೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ. ಏಕನೂ ಸಹಭಾಗಿಯೂ ಇಲ್ಲದ ಅಲ್ಲಾಹನೇ ಗೌರವಾನ್ವಿತನು ಮತ್ತು ಅವನ ವೈಭವವೇ ಶ್ರೇಷ್ಠ. ಹೀಗೆ ತಾವು ಜೀವಂತವಾಗಿರುವುದನ್ನು ಶತ್ರುಗಳಿಗೆ ತಿಳಿಸಿದರು. ಈ ಧೈರ್ಯವಂತ ಮತ್ತು ಶೂರತನದ ಉತ್ತರದ ಪ್ರಭಾವ ಸತ್ಯನಿಷೇಧಿಗಳ ಸೈನ್ಯದ ಮೇಲೆ ಎಷ್ಟು ಉಂಟಾಯಿತು ಎಂದರೆ, ಬೆರಳೆಣಿಕೆಯಷ್ಟು ಇದ್ದ ಮುಸ್ಲಿಮರ ಮೇಲೆ ಹಲ್ಲೆ ನಡೆಸಿ ಅವರನ್ನು ಮುಗಿಸುವುದು ಅವರಿಗೆ ಸಾಧ್ಯವಿದ್ದರೂ ಪುನಃ ದಾಳಿ ಮಾಡಲು ಅವರು ಧೈರ್ಯಪಡಲಿಲ್ಲ ಮತ್ತು ಅವರ ಪ್ರತೀಕ್ಷೆಗಳು ಮಣ್ಣುಪಾಲಾಯಿತು. ಲಭಿಸಿದ ವಿಜಯದ ಸಂತೋಷವನ್ನು ಆಚರಿಸಿ ಬೇಗನೇ ಮಕ್ಕಕ್ಕೆ ಮರಳಿ ಹೋಗುವುದೇ ಲೇಸು ಎಂದು ಶತ್ರುಗಳು ಭಾವಿಸಿದರು. (ಸೀಬಾಚ ತಫ್ಸಿರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–252–253)

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: **ಅಲ್ಲಝೀನ ಅಸ್ತಜಾಬೂ ಲಿಲ್ಲಾಹಿ ವರ್ರಸೂಲಿ ಮಿಮ್ ಬಅ್‌ದಿ ಮಾ ಅಸಾಬಹುಮುಲ್ ಖರ್‌ಹು, ಲಿಲ್ಲಝೀನ ಅಹ್ಸನೂ ಮಿನ್‌ಹುಮ್ ವತ್ತಖೌ ಅಜ್ರುನ್ ಅಝೀಮ್** (ಆಲಿ ಇಮ್ರಾನ್–173) ಎಂಬ ವಚನ ಸಹಾಬಿಯರ ಕುರಿತಾಗಿದೆ. ಹಝ್ರತ್ ಆಯಿಶ(ರ) ಉರ್‌ವರೊಂದಿಗೆ ಹೇಳಿದರು: ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಗಾಯಾಳುವಾದಾಗ, ಮುಶ್ರಿಕರು ಹಿಂದಿರುಗಿ ಹೋಗುತ್ತಿದ್ದರು. ಅವರು ಮರಳಿ ಬರುವರೋ ಎಂಬ ಆತಂಕ ಹಝ್ರತ್ ಪೈಗಂಬರ್(ಸ)ರಿಗೆ ಇತ್ತು. ಅವರನ್ನು ಯಾರಾರು ಹಿಂಬಾಲಿಸುವರು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಆಗ 70 ಜನರು ಅದಕ್ಕಾಗಿ ತಯಾರಾದರು. ಹಝ್ರತ್ ಆಯಿಶ(ರ) ಹೇಳುತ್ತಾರೆ: ಹೇ ನನ್ನ ಸಹೋದರಿ ಪುತ್ರಾ, ನಿನ್ನ ತಾತಂದಿರಾದ ಝುಬೇರ್ ಮತ್ತು ಹಝ್ರತ್ ಅಬೂಬಕರ್(ರ) ಸಹ ಅವರಲ್ಲಿದ್ದರು.
(ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್–4077)

ಈ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಆಶ್ಚರ್ಯಕರವಾದ ಸಂಗತಿಯೇನೆಂದರೆ, ಖುರೈಶಿಗಳಿಗೆ ಆ ಸಂದರ್ಭದಲ್ಲಿ ಮುಸ್ಲಿಮರ ವಿರುದ್ಧ ವಿಜಯ ಲಭಿಸಿತು. ಬಾಹ್ಯವಾದ ಸಂಗತಿಗಳ ದೃಷ್ಟಿಯಲ್ಲಿ ಅವರು ಈ ವಿಜಯದಿಂದ ಲಾಭ ಪಡೆಯಬಹುದಾಗಿತ್ತು. ಅದಕ್ಕಿರುವ ಮಾರ್ಗವೂ ತೆರೆದಿತ್ತು. ಆದರೂ ಖುರೈಶಿಗಳ ಹೃದಯಗಳು ಒಳಗಿಂದೊಳಗೆ ಭಯಗೊಂಡಿದುವು. ಅವರಿಗೆ ಉಹದಿನಲ್ಲಿ ಲಭಿಸಿದ ಲಾಭವನ್ನೇ ಸಾಕಷ್ಟು ಎಂದು ಭಾವಿಸಿಕೊಂಡು ಬೇಗನೇ ಮಕ್ಕಕ್ಕೆ ಮರಳುವುದು ಲೇಸೆಂದು ಭಾವಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ಹೆಚ್ಚಿನ ಮುಂಜಾಗ್ರತಾ ಕ್ರಮವೆಂಬಂತೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಝುಬೇರ್(ರ) ಕೂಡ ಇದ್ದ 70 ಸಹಾಬಿಯರ ಒಂದು ಸಂಘವನ್ನು ಖುರೈಶಿ ಸೈನ್ಯದ ಹಿಂದೆ ಕಳುಹಿಸಿದರು. ಇದು ಬುಖಾರಿಯ ವರದಿಯಾಗಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ) ಅಥವಾ ಕೆಲವು ವರದಿಗಳ ಪ್ರಕಾರ ಸಅದ್ ಬಿನ್ ವಖಾಸ್‌ರನ್ನು ಖುರೈಶಿ ಸೈನ್ಯಗಳ ಹಿಂದೆ ಕಳುಹಿಸಿದರು ಎಂದೂ ಇದೆ. ಅವರೊಡನೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಖುರೈಶಿಗಳಿಗೆ ಮದೀನದ ಮೇಲೆ ಪುನಃ ಹಲ್ಲೆ ನಡೆಸುವ ಉದ್ದೇಶವಿದೆಯೇ ಎಂದು ತಿಳಿದು ಬನ್ನಿರಿ. ಖುರೈಶಿಗಳು ಒಂಟೆಗಳ ಮೇಲೆ ಸವಾರರಾಗಿ ಮತ್ತು ಕುದುರೆಯನ್ನು ಸವಾರಿಯಿಲ್ಲದೇ ನಡೆಸುತ್ತಿದ್ದರೆ, ಅವರು ಮಕ್ಕದ ಕಡೆಗೆ ಮರಳಿ ಹೋಗುತ್ತಿದ್ದಾರೆ ಎಂದು ತಿಳಿಯಿರಿ. ಆದರೆ ಅವರು ಕುದುರೆಗಳ ಮೇಲೆ ಸವಾರರಾಗಿದ್ದರೆ ಅವರು ಸದುದ್ದೇಶವನ್ನು ಹೊಂದಿಲ್ಲವೆಂದು ತಿಳಿಯಿರಿ. ಖುರೈಶಿಗಳ ಸೈನ್ಯ ಮದೀನದ ಕಡೆಗೆ ಮುಖ ಮಾಡಿದರೆ, ಬೇಗನೇ ತಿಳಿಸಬೇಕೆಂದು ಹಝ್ರತ್ ಪೈಗಂಬರ್(ಸ) ತಾಕೀತು ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಹೀಗೆ ಹೇಳಿದರು: ಖುರೈಶಿಗಳು ಈಗ ಮದೀನದ ಮೇಲೆ ದಾಳಿ ನಡೆಸಿದರೆ ಅಲ್ಲಾಹನಾಣೆ, ನಾವು ಅವರೊಡನೆ ಹೋರಾಡಿ ಅವರಿಗೆ ಪ್ರತಿದಾಳಿಯ ರುಚಿಯನ್ನು ಸವಿಸುವೆವು. ಹೇಗಿದ್ದರೂ ಖುರೈಶಿಗಳ ಸೈನ್ಯ ಮಕ್ಕದ ಕಡೆಗೆ ಹೋಗುತ್ತಿದೆ ಎಂಬ ಮಾಹಿತಿಯನ್ನು ಹಿಂಬಾಲಿಸಲು ಹೋಗಿದ್ದ ಸಂಘ ಬೇಗನೇ ತಂದಿತು. (ಸೀರತ್ ಖಾತಮನ್ನಬೀಈನ್, ಪುಟ–499–500)

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಎದುರು ತೌರಾತಿನ ಉದಾಹರಣೆ ಎಂದರೆ ಒಂದು ಪ್ರವಾಸಿ ತಂಗುದಾಣವಿತ್ತು. ಅದು ದೊಡ್ಡ ದುರಂತಗಳಿಗೆ ಗುರಿಯಾಗಿ ಬಿದ್ದು ಹೋಯಿತು. ಅದು ಇಟ್ಟಿಗೆಗಳ ಒಂದು ರಾಶಿಯಾಗಿ ಪರಿವರ್ತನೆಗೊಂಡಿತು. ಸಂಡಾಸಿನ ಇಟ್ಟಿಗೆಗಳು ಅಡುಗೆ ಮನೆಯಲ್ಲಿ ಮತ್ತು ಅಡುಗೆ ಮನೆಯ ಇಟ್ಟಿಗೆಗಳು ಸಂಡಾಸಿನಲ್ಲಿ ಹೋಗಿ ಬಿದ್ದವು. ಹೀಗೆ ಸ್ಥಿತಿಯ ಮೇಲೆ ದಯೆ ಬಂತು. ಆದುದರಿಂದ ಅವನು ತಕ್ಷಣದಿಂದ ಆ ಪ್ರವಾಸ ತಂಗುದಾಣವನ್ನು ಒಂದು ಅತ್ಯುತ್ತಮ ಮತ್ತು ಆರಾಮದಾಯಕ ತಂಗುದಾಣವಾಗಿ ನಿರ್ಮಿಸಿದನು. ಅದು ಮೊದಲಿಗಿಂತ ಉತ್ತಮ ಮತ್ತು ಪ್ರವಾಸಿಗರಿಗೆ ಅತ್ಯಂತ ಆರಾಮದಾಯಕ ಗೃಹಗಳನ್ನು ಅಚ್ಚುಕಟ್ಟಾದ ರೀತಿಯಲ್ಲಿ ನಿರ್ಮಿಸಿದನು. ಅದರಲ್ಲಿ ಯಾವ ಕೊರತೆಯೂ ಇರಲಿಲ್ಲ. ಆ ಮಾಲೀಕನು ಅಂತಿಮವಾಗಿ ಆ ಪ್ರವಾಸಿ ತಂಗುದಾಣ ನಿರ್ಮಿಸುವಾಗ ಕೆಲವು ಅದೇ ಮೊದಲಿನ ತಂಗುದಾಣದ ಇಟ್ಟಿಗೆಗಳನ್ನು ತೆಗೆದುಕೊಂಡನು ಮತ್ತು ಕೆಲವು ಹೊಸ ಇಟ್ಟಿಗೆಗಳನ್ನು ಹಾಗೂ ಕಟ್ಟಿಗೆ ಇತ್ಯಾದಿ ಸಾಮಗ್ರಿಗಳು ಸಂಗ್ರಹಿಸಿದನು. ಅವು ಕಟ್ಟಡವನ್ನು ಪೂರ್ಣಪ್ರಮಾಣದಲ್ಲಿ ಕಟ್ಟಲು ಪ್ರಾಪ್ತವಾಗಿದ್ದವು. ಹಾಗೆ ಪವಿತ್ರ ಖುರ್‌ಆನ್ ಅದೇ ಇನ್ನೊಂದು ತಂಗುದಾಣವಾಗಿದೆ. ಯಾರ ಕಣ್ಣಿದೆಯೋ ಅವರು ನೋಡಿಕೊಳ್ಳಲಿ. (ಅದೇ ಪುಟ 361).

**ಸಿರಾಜುದ್ದೀನ್ ಈಸಾಯಿಯ ಮೂರನೇ ಪ್ರಶ್ನೆಯ ಉತ್ತರ: ತೌರಾತ್ ಮತ್ತು ಇಂಜೀಲ್ ನಲ್ಲಿಲ್ಲದ ಪವಿತ್ರ ಖುರ್‌ಆನ್‌ನಲ್ಲಿ ಇರುವ ಮಾನವ ಕುಲಕ್ಕೆ ಬೇಕಾದ, ಮಾನವರ ಪರಸ್ಪರ ಪ್ರೀತಿಯ ಬಗ್ಗೆ ಯಾವ ಉತ್ತಮ ಶಿಕ್ಷಣವಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಈ ಮೂರನೆಯ ಪ್ರಶ್ನೆಯ ಅಂಶವೇನಿದೆ ಎಂದರೆ ಪವಿತ್ರ ಖುರ್‌ಆನ್‌ನಲ್ಲಿ ಮನುಷ್ಯನು ಮನುಷ್ಯನೊಡನೆ ಪ್ರೀತಿಸಬೇಕು ಎಂದು ಎಲ್ಲಿ ಬರೆಯಲಾಗಿದೆ. ಅದರ ಉತ್ತರವೆಂದರೆ ಖುರ್‌ಆನ್ ಈ ಸ್ವರದಲ್ಲಿ ಪ್ರೀತಿಯ ಬದಲಿಗೆ ದಯೆ ಮತ್ತು ಅನುಕಂಪದಂತಹ ಪದಗಳನ್ನು ಪ್ರಯೋಗಿಸಿದೆ. ಏಕೆಂದರೆ ಪ್ರೀತಿಯ ಉತ್ತುಂಗ ಸ್ಥಾನ ಆರಾಧನೆ ಆಗಿದೆ. ಆದುದರಿಂದ ಪ್ರೀತಿಯ ನಿಜವಾದ ಪದ ವಾಸ್ತವರೂಪದಲ್ಲಿ ಅಲ್ಲಾಹನೊಂದಿಗಿನ ವಿಶೇಷ ಗುಣವಾಗಿದೆ. ಹಾಗೆ ಮಾನವ ಕುಲಕ್ಕಾಗಿ ಪ್ರೇಮದ ಬದಲು ಅಲ್ಲಾಹನ ಗ್ರಂಥದಲ್ಲಿ ದಯೆ ಮತ್ತು ಔದಾರ್ಯ ಪದಗಳು ಬಂದಿವೆ. ಏಕೆಂದರೆ ಪ್ರೇಮದ ಉತ್ತುಂಗವು ಆರಾಧನೆಯನ್ನು ಬಯಸುತ್ತದೆ. ದಯೆಯು ಅನುಕಂಪ ಬಯಸುತ್ತದೆ. ಈ ವ್ಯತ್ಯಾಸವನ್ನು ಇತರ ಸಮುದಾಯಗಳು ಅರ್ಥ ಮಾಡಿಕೊಂಡಿಲ್ಲ. ಹೀಗೆ ಅಲ್ಲಾಹನ ಹಕ್ಕನ್ನು ಬೇರೆಯವರಿಗೆ ನೀಡಿದ್ದಾರೆ. ಯೇಸುವಿನ ಬಾಯಿಯಿಂದ ಇಂತಹ ಬಹುದೇವರಾಧನೆಯ ಪದ ಹೊರಬಂದಿದೆ ಎಂಬುದು ನಾನು ನಂಬುವುದಿಲ್ಲ. ಬದಲಿಗೆ ನಾನು ಯೋಚಿಸುವುದೇನೆಂದರೆ ನಂತರ ಇಂತಹ ಅಸಹ್ಯ ಪದಗಳು ಸೇರಿಸಲಾಗಿದೆ ಮತ್ತು ಅನಾವಶ್ಯಕವಾಗಿ ಯೇಸುವಿನ ಹೆಸರು ಕೆಡಿಸಲಾಗಿಗಿದೆ. ಅಲ್ಲಾಹನ ಪರಿಶುದ್ಧ ಗ್ರಂಥದಲ್ಲಿ ಸಾಮಾನ್ಯ ಜನರಿಗೆ ರಹಮ್(ದಯೆ)ನ ಪದ ಬಂದಿದೆ ಅಲ್ಲಾಹನು ನುಡಿಯುತ್ತಾನೆ: **ತವಾಸೌ ಬಿಲ್‌ಹಖ್ಖಿ ವತವಾಸೌ ಬಿಲ್ ಮರ್‌ಹಮತಿ** ಅಂದರೆ ಸತ್ಯವಿಶ್ವಾಸಿ ಯಾರಾಗಿದ್ದಾರೆ ಎಂದರೆ ಅವರು ಸಹನೆ ದೋರಲು ಪರಸ್ಪರ ಉಪದೇಶಿಸುವ ಮತ್ತು ಕರುಣೆದೋರಲು ಅನ್ಯೋನ್ಯ ಭೋದಿಸುವವರಾಗಿರುವರು. ಇನ್ನೊಂದು ಸ್ಥಳದಲ್ಲಿ ಹೇಳಿದನು. **ಇನ್ನಲ್ಲಾಹ ಯಾಮುರು ಬಿಲ್‌ಅದ್ಲಿ ವಲ್ ಇಹ್ಸಾನಿ ವ ಈತಾಯಿಝಿಲ್ ಖುರ್‌ಬಾ** ಅಂದರೆ ಅಲ್ಲಾಹನ ಆಜ್ಞೆ ಏನೆಂದರೆ ನೀವು ಜನಸಾಮಾನ್ಯರೊಡನೆ ನ್ಯಾಯಯುತವಾಗಿ ವರ್ತಿಸಿರಿ ಮತ್ತು ಅದಕ್ಕಿಂತ ಮಿಗಿಳಾಗಿ ಅವರ ಮೇಲೆ ಉಪಕಾರ ಮಾಡಿರಿ. ಅದಕ್ಕಿಂತ ಮಿಗಿಲಾಗಿ ನೀವು ಮಾನವಕುಲದೊಳಗೆ ಎಂತಹ ಅನುಕಂಪದಿಂದ ವರ್ತಿಸಬೇಕೆಂದರೆ ತಮ್ಮ ನಿಕಟ ಸಂಬಂಧಿಯೊಡನೆ ವರ್ತಿಸಿದಂತೆ ವರ್ತಿಸಿರಿ.

ಈಗ ಯೋಚಿಸಬೇಕಾಗಿದೆ. ಅದಕ್ಕಿಂತ ಉತ್ತಮ ಶಿಕ್ಷಣ ಲೋಕದಲ್ಲಿ ಯಾವುದಿರಬಹುದು, ಅದು ಎಲ್ಲಾ ಮಾನವ ಕುಲಕ್ಕಾಗಿ ಸದ್ಭಾವನೆ ಮತ್ತು ಔದಾರ್ಯ ತೋರಿಸುವ ಮಟ್ಟಿಗೆ ಸೀಮಿತಗೊಳಿಸಲಿಲ್ಲ, ಬದಲು ಸಹಜ ರೀತಿಯಲ್ಲಿ ತಮ್ಮ ನಿಕಟ ಬಂಧದೊಡನೆ ವರ್ತಿಸಿದಂತೆ ವರ್ತಿಸಲು ಪ್ರೇರೇಪಿಸಿದೆ. ಅದರ ಹೆಸರು "ಇತಾಯಿ ಝಿಲ್ ಖುರ್ಬಾ" ಎಂದಾಗಿದೆ. ಏಕೆಂದರೆ ಔದಾರ್ಯ ತೋರಿಸುವವರು ಔದಾರ್ಯ ತೋರಿಸುವ ಸಮಯದಲ್ಲಿ ಒಂದು ಪುಣ್ಯ ಮಾಡುತ್ತಾನೆ. ಆದರೆ ಪ್ರತಿಫಲ ಅಥವಾ ಶಿಕ್ಷೆ ಬಯಸುತ್ತಾನೆ. ಆದುದರಿಂದ ಅವನು ಒಂದು ಸಂದರ್ಭದಲ್ಲಿ ಉಪಕಾರ ಮರೆಯಬಹುದು ಮತ್ತು ಅವನ ಮೇಲೆ ಅಸಂತುಷ್ಟಗೊಳ್ಳಬಹುದು. ಮತ್ತು ಎಂದಾದರೂ ತನ್ನ ಉಪಕಾರ ನೆನಪಿಸಬಹುದು. ಅದರೆ ಸಹಜ ಪ್ರವೃತ್ತಿಯಿಂದ ಪುಣ್ಯ ಕಾರ್ಯ ಮಾಡುವುದು ಅದನ್ನು ಖುರ್‌ಆನ್ ಝುಇಲ್ ಖುರ್ಬಾ ಪುಣ್ಯರೊಂದಿಗೆ ಹೋಲಿಕೆ ನೀಡಿದೆ. ಇದು ವಾಸ್ತವದಲ್ಲಿ ಪುಣ್ಯದ ಅತ್ಯುನ್ನತ ಸ್ಥಾನವಾಗಿದೆ. ಅದಾದ ನಂತರ ಪುಣ್ಯದ ಯಾವ ಸ್ಥಾನವು ಇಲ್ಲ. ಏಕೆಂದರೆ ತಾಯಿಯು ತನ್ನ ಮಗನೊಂದಿಗೆ ಪ್ರೀತಿಯ ಯಾವ ಪ್ರತಿಫಲವನ್ನು ಬಯಸುವುದಿಲ್ಲ. ಅದರೆ ಕರುಣೆ ಒಂದು ಸಹಜ ಕ್ರಿಯೆಯಾಗಿದೆ. ಆ ಹಾಲುಣಿಸುವ ಮಗುವಿನಿಂದ ತಾಯಿ ಯಾವ

ಕೃತಜ್ಞತೆಯು ಉದ್ದೇಶಿಸುವುದಿಲ್ಲ.

ಈ ಮೂರು ದರ್ಜೆಗಳು ಮಾನವಕುಲಕ್ಕಾಗಿ ಹಕ್ಕುಗಳಾಗಿವೆ. ಅದನ್ನು ಪವಿತ್ರ ಖುರ್‌ಆನ್ ವಿವರಿಸಿದೆ ಇದೀಗ ನಾವು ತೌರಾತ್ ಮತ್ತು ಇಂಜೀಲನ್ನು ನೋಡಿದರೆ ನಮಗೆ ಸತ್ಯವಾಗಿ ಹೇಳಬೇಕಾಗುತ್ತದೆ. ಈ ಎರಡು ಗ್ರಂಥಗಳು ಆ ಉನ್ನತಮಟ್ಟದ ಹಕ್ಕುಗಳಿಂದ ದೂರವಾಗಿವೆ. ಈ ಎರಡೂ ಗ್ರಂಥಗಳಿಂದ ಈ ಮೂರನೆಯ ದರ್ಜೆಯ ಅವಕಾಶ ಬಯಸುವುದು ಹೇಗೆ ಸಾಧ್ಯವಾದೀತು. ಅದರಲ್ಲಿ ಮೊದಲು ಮತ್ತು ಎರಡನೆಯ ದರ್ಜೆಗಳನ್ನು ಸಹ ಸರಿಯಾಗಿ ವಿವರಿಸಲ್ಪಟ್ಟಿಲ್ಲ. (ಅದೇ ಪುಟ 369).

**ತೌರಾತ್ ಕೇವಲ ಯಹೂದಿಯರದೇ ಆಗಿದೆ ಖುರ್‌ಆನ್ ಎಲ್ಲ ಮಾನವಕುಲಕ್ಕಾಗಿ ಅವತರಿಸಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ತೌರಾತ್ ಕೇವಲ ಯಹೂದಿಯರಿಗಾಗಿ ಅವತರಿಸಿದೆ ಮತ್ತು ಹಝ್ರತ್ ಮಸೀಹ್ ಅವರಿಗೆ ಇತರರೊಂದಿಗೆ ಯಾವ ಸಂಬಂಧ? ಅವರಿಂದ ಏನು ಬೇಕಾಗಿದೆ? ಅವರ ನ್ಯಾಯ ಬನೀ ಈಸ್ರಾಯಿಲರಿಗೆ ಪರಿಮಿತ ಹೊಂದಿದ್ದವು ಪರಿಮಿತ ಹೊಂದಿಲ್ಲ ಎಂದಾದರೆ ಏಕೆ, ಯೆಸು ಒಬ್ಬ ಮಹಿಳೆ ಪರಿಪರಿಯಾಗಿ ಬೇಡಿಕೊಂಡರು ಅವಳ ಬೇಡಿಕೆ ಸ್ವೀಕರಿಸಲಿಲ್ಲ? ಅಷ್ಟಾದರು ಯೇಸುವಿಗೆ ಅವಳ ಮೇಲೆ ದಯೆ ಬರಲಿಲ್ಲ ಮತ್ತು ಹಿಗೆ ಏಕೆ ಹೇಳಿದನು? ನಾನು ಕೇವಲ ಬನೀ ಈಸ್ರಾಯಿಲರಿಗಾಗಿ ಕಳುಹಿಸಲ್ಪಟ್ಟಿದ್ದೇನೆ ಎಂದು. ಹಾಗೆ ಸ್ವಯಂ ಇತರರಿಗಾಗಿ ಬನಿ ಈಸ್ರಾಯಿಲ ಬಿಟ್ಟುಕೊಡದಿದ್ದಾಗ ಅವರ ಶಿಕ್ಷಣದಲ್ಲಿ ಇತರ ಸಮುದಾಯಗಳ ಮೇಲೂ ದಯೆ ತೋರುವ ಆಜ್ಞೆಯಿದೆ ಎಂದು ಹೇಗೆ ತಾವು ನಂಬಿಕೆ ಇಡಲು ಸಾಧ್ಯ? ಯೇಸು ಸ್ಪಷ್ಟವಾಗಿ ಹೇಳಿರುವರು. ನಾನು ಇತರ ಸಮುದಯಗಳಿಗಾಗಿ ಕಳುಹಿಸಲ್ಪಟ್ಟಿಲ್ಲ ಎಂದು. ಇದೀಗ ಅವರಿಂದ ಹೇಗೆ ನಾವು ನಂಬಲು ಸಾಧ್ಯ? ಯೇಸುವಿನ ಶಿಕ್ಷಣದಲ್ಲಿ ಇತರ ಸಮುದಯಗಳ ಮೇಲೂ ದಯೆ ತೋರಲು ನಿರ್ದೇಶನಗಳಿವೆ ಎಂದು. ಖಂಡಿತ ಇಲ್ಲ. ಯೇಸುವಿನ ಶಿಕ್ಷಣದ ಗುರಿ ಕೇವಲ ಯಹೂದಿಯರಾಗಿದ್ದವು. ಮತ್ತು ಯೇಸು ಸ್ವಯಂ ತನ್ನನ್ನು ಅದಕ್ಕೆ ಅರ್ಹರೆಂದು ಪರಿಗಣಿಸುತ್ತಿರಲಿಲ್ಲ. ಹೇಗೆ ತಾನೇ ಇತರ ಸಮುದಯಗಳಿಗೆ ನಿರ್ದೇಶನ ವಿವರಿಸಲು ಸಾಧ್ಯ. ಮತ್ತು ಅವರು ಹೇಗೆ ಸಾರ್ವಜನಿಕವಾಗಿ ಕರುಣೆಯ ಶಿಕ್ಷಣ ನೀಡಲು ಸಾಧ್ಯ. ಇಂಜೀಲಿನಲ್ಲಿ ಯೇಸುವಿನ ಈ ಮಾತಿಗೆ ವಿರುದ್ಧವಾಗಿ ನನ್ನ ಶಿಕ್ಷಣ ಯಹೂದಿಯರಿಗಷ್ಟೇ ಸೀಮಿತವಾಗಿದೆ ಅದನ್ನು ಹೊರತುಪಡಿಸಿ ಇನ್ನು ಯಾವುದಾದರೂ ಮಾತು ಬರೆಯಲ್ಪಟ್ಟರೂ ಅದು ನಿಸ್ಸಂಶಯವಾಗಿಯೂ ಆ ಮಾತು ಅಷ್ಟಕ್ಕೆ ಸೀಮಿತವಾಗುವುದು ಏಕೆಂದರೆ ವಿರೋಧಾಭಾಸ ಸಲ್ಲದು.

ಅದೇ ರೀತಿ ತೌರಾತ್ ದೃಷ್ಟಿಯಲ್ಲೂ ಕೇವಲ ಯಹೂದಿಯರಿದ್ದರು. ತೌರಾತಿನ ಶಿಕ್ಷಣವು ಸಹ ಯಹೂದಿಯರಿಗಷ್ಟೇ ಸೀಮಿತವಾಗಿದೆ. ಆದರೆ ಎಲ್ಲಾ ಸಮುದಾಯಗಳಿಗೆ ಬಂದಂತಹ ಶಿಕ್ಷಣ, ಸಾರ್ವತ್ರಿಕ ನ್ಯಾಯ, ಔದಾರ್ಯ ಮತ್ತು ಅನುಕಂಪ ಅದು ಕೇವಲ ಖುರ್‌ಆನ್‌ನಲ್ಲಿದೆ. ಅಲ್ಲಾಹನು ಹೇಳಿದನು. **ಖುಲ್ ಯಾ ಅಯ್ಯುಹನ್ನಾಸು ಇನ್ನಿ ರಸೂಲುಲ್ಲಾಹಿ ಇಲೈಕುಮ್ ಜಮೀಅ** ಅಂದರೆ ಹೇಳು ಓ ಜನರೆ ನಾನು ನಿಮ್ಮೆಲ್ಲರಿಗಾಗಿಯೂ ಕಳುಹಿಸಲ್ಪಟ್ಟಿದ್ದೇನೆ. ಮತ್ತೆ ಹೇಳಿದನು. **ವಮಾ ಅರ್ಸಲ್ನಾಕ ಇಲ್ಲಾ ರಹಮತಲ್ ಲಿಲ್ ಆಲಮೀನ್** ಅಂದರೆ ನಾವು ನಿನಗೆ ಎಲ್ಲ ಲೋಕಗಳಿಗಾಗಿ ಅನುಗ್ರಹಿತನನ್ನಾಗಿ ಕಳುಹಿಸಿದ್ದೇನೆ (ಅದೇ ಪುಟ 370).

**ತೌರಾತ್ ಮತ್ತು ಇಂಜೀಲ್ ಖುರ್‌ಆನ್‌ನ್ನು ಹೇಗೆ ಎದುರಿಸಲು ಸಾಧ್ಯ. ತೌರಾತ್ ಮತ್ತು ಇಂಜೀಲ್ ಜ್ಞಾನ ಸಾಕ್ಷ್ಯಗಳಲ್ಲಿ ಸೂರ: ಫಾತಿಹಾನೊಂದಿಗೆ ಸಹ ಸ್ಪರ್ಧಿಸುವ ಶಕ್ತಿ ಹೊಂದುವುದಿಲ್ಲ. ಪಾದರಿ ಸಾಹೇಬರು ತನ್ನ ಎಲ್ಲ ಗ್ರಂಥಗಳಿಂದ ಕೇವಲ ಸೂರ: ಫಾತಿಹನನ್ನೇ ಎದುರಿಸಿ ತೋರಿಸಿದರೆ ಅವರಿಗೆ ಐದು ನೂರು ರೂಪಾಯಿಗಳನ್ನು ನಗದು ಬಹುಮಾನ ಕೊಡುವ ವೈಭವಯುತ ವಾಗ್ದಾನ ಮತ್ತು ಪಂಥಾಹ್ವಾನ.**

ಈಗ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥ್ವಾನನ್ನು ಪ್ರಸ್ತುತಪಡಿಸುತ್ತೇವೆ. ಅದನ್ನು ಅವರು ಪಾದರಿ ಸಾಹೇಬರುಗಳಿಗೆ ನೀಡಿದ್ದರು. ತೌರಾತ್ ಮತ್ತು ಇಂಜೀಲನ್ನು ಖುರ್‌ಆನ್‌ನೊಂದಿಗೆ ಹೊಲಿಸಿ ಕೊಡಲು ಮತ್ತು ಖುರ್‌ಆನ್‌ನ ಶಿಕ್ಷಣದ ಮೇಲೆ ಪ್ರಾಬಲ್ಯ ಹೊಂದಿದ್ದನ್ನು ವಿವರಿಸಿದ ನಂತರ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "ಅಂದ ಹಾಗೆ ತೌರಾತ್ ಮತ್ತು ಇಂಜೀಲ್ ಖುರ್‌ಆನ್‌ನ್ನು ಹೇಗೆ ಎದುರಿಸಲು ಸಾಧ್ಯವಾದೀತು. ಅವರು ಕೇವಲ ಪವಿತ್ರ ಖುರ್‌ಆನ್‌ನ ಮೊದಲ ಅಧ್ಯಾಯದೊಂದಿಗೆಯೆ ಸ್ಪರ್ಧಿಸಬಯಸಿದರೆ ಅಂದರೆ ಸೂರ: ಫಾತಿಹ ಅದು ಕೇವಲ 7 ವಚನಗಳನ್ನು ಹೊಂದಿದೆ. ಯಾವ ಶ್ರೇಣಿ, ಸ್ಥಾನ ಮತ್ತು ಪ್ರಬಲ ಆಜ್ಞೆಗಳನ್ನು ಹೊಂದಿದೆ ಮತ್ತು ಜ್ಞಾನ ಮತ್ತು ಆಧ್ಯಾತ್ಮಿಕ ಯುಕ್ತಿಗಳು, ಅದೆಲ್ಲ ಸೂರ: ಫಾತಿಹದೊಂದಿಗೆ ಅದನ್ನು ಮೂಸಾರ ಗ್ರಂಥ ಅಥವಾ ಯೇಸುವಿನ ಕೆಲ ಪುಟಗಳಿಂದ ತೆಗೆಯ ಬಯಸಿದರೆ, ಜೀವನ ಪರ್ಯಂತ ಪ್ರಯತ್ನ ಮಾಡಲಿ. ಆದರೆ ಗುರಿ ಸಾಧಿಸುವುದಿಲ್ಲ. ಇದು ಬರೀ ಮಾತಿನ ವಿಷಯವಲ್ಲ. ಬದಲು ನಿಜವಾದ ಮತ್ತು ವಾಸ್ತವಿಕತೆಯೂ ಅದೇ ಆಗಿದೆ. ತೌರಾತ್ ಮತ್ತು ಇಂಜೀಲ್ ಜ್ಞಾನ ಸಾಕ್ಷ್ಯಗಳಲ್ಲಿ ಸೂರಃ ಫಾತಿಹದೊಂದಿಗೆಯೇ ಎದುರಿಸುವ ಶಕ್ತಿ ಹೊಂದಿಲ್ಲ. ನಾವು ಏನು ಮಾಡಲು ಸಾಧ್ಯ? ಮತ್ತು ಹೇಗೆ ನಿರ್ಣಯಿಸಲಿ? ಪಾದರಿ ಸಾಹೇಬರುಗಳು ನಮ್ಮ ಯಾವ ಮಾತು ಸ್ವೀಕರಿಸುತ್ತಿಲ್ಲ. ಅವರು ತನ್ನ ತೌರಾತ್ ಅಥವಾ ಇಂಜೀಲಿನ ಜ್ಞಾನ ಸಾಕ್ಷ್ಯಗಳನ್ನು ವಿವರಿಸಲು ಮತ್ತು ಏಕದೇವತ್ವದ ವಿಶೇಷ ಗುಣಗಳನ್ನು ನಾವು ಸೂರ: ಫಾತಿಹದಿಂದ ಪ್ರಸ್ತುತಪಡಿಸುವಷ್ಟೇ ತೋರಿಸಿಕೊಟ್ಟರೆ ನಾವು ಅವರಿಗೆ ಬಹುಮಾನ ರೂಪದಲ್ಲಿ ಐದು ನೂರು ರೂಪಾಯಿಗಳನ್ನು ನಗದು ಕೊಡಲು ಸಿದ್ಧರಿದ್ದೇವೆ. ಅವರು ತಮ್ಮ ಎಲ್ಲ ಗ್ರಂಥಗಳಿಂದ ಅವು 70ರಷ್ಟಿರಬಹುದು. ಅವು ಸತ್ಯಸಾಕ್ಷ್ಯಗಳು, ಶರೀಅತ್ತಿನ ಜ್ಞಾನ ಮತ್ತು ಶ್ರೇಣಿ ಹಾಗೂ ಜಾಣ್ಮೆಭರಿತ ಜ್ಞಾನ ಏಕದೇವತ್ವದ ಗುಣ ವಿಶೇಷಗಳು ನಾವು ಸೂರಃ ಫಾತಿಹದಲ್ಲಿ ಪ್ರಸ್ತುತಪಡಿಸಿದಷ್ಟೇ ತೋರಿಸಿಕೊಟ್ಟರೆ, ನಾವು ಕೊಡುವ ಈ ರೂಪಯಿಗಳು ಕಡಿಮೆ ಎನಿಸಿದರೆ ನಮಗೆ ಸಾಧ್ಯವಾದಷ್ಟು ನೀವು ಬೇಡಿಕೆ ಸಲ್ಲಿಸಿದರೆ ಹೆಚ್ಚಿಸಬಹುದು. ನಾವು ಮೊದಲು ಸೂರಃ ಫಾತಿಹದ ವ್ಯಾಖ್ಯಾನ ವಿವರಣೆ ತಯಾರಿಸಿ ಮುದ್ರಿಸುವೆವು. ಅದರಲ್ಲಿ ಎಲ್ಲಾ ರೀತಿಯ ಸತ್ಯಸಾಕ್ಷ್ಯಗಳು, ಆಧ್ಯಾತ್ಮಿಕ ಜ್ಞಾನ ಏಕದೇವತ್ವದ ಗುಣವಿಶೇಷಗಳು ವಿವರವಾಗಿ ಬರೆಯುವೆವು. ಅವು ಸೂರಃ ಫಾತಿಹ ಒಳಗೊಂಡಿರುತ್ತದೆ. ನಂತರ ಪಾದರಿ ಸಾಹೇಬರುಗಳ ಕರ್ತವಾಗುವುದು ತೌರಾತ್ ಮತ್ತು ಇಂಜೀಲ್ ಮತ್ತು ತಮ್ಮ ಎಲ್ಲಾ ಗ್ರಂಥಗಳಿಂದ ಸೂರಃ ಫಾತಿಹಾ ಎದುರಿಗೆ ಅದರಂತೆಯೇ ಸತ್ಯಸಾಕ್ಷ್ಯಗಳು, ಆಧ್ಯಾತ್ಮಿಕ ಜ್ಞಾನ ಪವಾಡಯುಕ್ತ ಅದ್ಭುತ ಕಾರ್ಯಗಳು ಅವು ಮನುಷ್ಯನಲ್ಲಿರುವಂತಹ ನ್ಯೂನತೆಗಳಿಂದ ಮುಕ್ತವಾಗಿರುವುದನ್ನು ಪ್ರಸ್ತುತಪಡಿಸಿದರೆ ಮತ್ತು ಎದುರಿಸಿ ತೋರಿಸಿದರೆ, ಅವುಗಳನ್ನು ಅನ್ಯ ಸಮುದಯದ ಮೂರು ನ್ಯಾಯವಂತರ ಮುಂದೆ ಸೂರ: ಫಾತಿಹದಲ್ಲಿರುವಂತಹ ಸತ್ಯಸಾಕ್ಷ್ಯಗಳು, ಆಧ್ಯಾತ್ಮಿಕ ಜ್ಞಾನಗಳು, ಏಕದೇವತ್ವದ ಗುಣವಿಶೇಷಗಳನ್ನು ಸಾಬೀತು ಮಾಡಿ ತೋರಿಸಿದರೆ ನಾವು ಐದು ನೂರು ರೂಪಾಯಿಗಳನ್ನು ಮುಂಗಡ ರೂಪದಲ್ಲಿ ಅವರಿಗೆ ಖಾತರಿಯಿರುವಂತಹ ಸ್ಥಳದಲ್ಲಿ ಜಮೆ ಮಾಡುವೆವು. (ಅದೇ ಪುಟ 360). ಈಗ ಯಾವ ಪಾದರಿಗಾದರೂ ಅದನ್ನು ಎದುರಿಸಲು ಧೈರ್ಯವಿದೆಯೇ?

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ* **01ರ** *ಉಳಿದ ಭಾಗ)*

ತಾಯಿಯ ಹಾಲು ಪ್ರಾಣಿ ಹಾಲಲ್ಲವೇ? ಯಾರು ತಾಯಿಯ ಹಾಲು ಕುಡಿಯುವುದಿಲ್ಲ. ಅವರು ಜಾನುವಾರುಗಳ ಹಾಲು ಕುಡಿಯುತ್ತಾರೆ. ಅದೂ ಸಹ ಪ್ರಾಣಿಗಳ ಆಹಾರವೇ. ಯಾಋಉ ತೋರಿಕೆಗೆ ಮಾತ್ರ ಪ್ರಾಣೀಗಳ ಆಹಾರವನ್ನು ಸೇವಿಸದಿರಲು ನಿರಾಕರಿಸುತ್ತಾರೆ. ಅವರು ವಯಸ್ಸಾದ ಮೇಲೆ ಸಹ ತುಪ್ಪ, ಹಾಲು ಬಳಕೆ ಮಾಡುತ್ತಾರೆ. ಅದು ಪ್ರಾಣಿಯ ಆಹಾರವೇ ಆಗಿದೆ ಅಂದಹಾಗೆ ಅಂತಹ ಯಾವ ಮನುಷ್ಯನೂ ಇಲ್ಲ ಅವನ ಮುಕ್ಯ ಆಹಾರ ಪ್ರಾಣೀಗಳ ಆಹಾರವೇ ಆಗಿರುತ್ತದೆ. ಅಂತಹವರು ಒಂದು ಸ್ವಯಂ ಮೋಸ ಹೊಗಿರುತ್ತಾರೆ ಅಥವಾ ಕುರುಡು ಜಾಣರಾಗಿ ಇತರರಿಗೆ ಮೋಸಗೊಳಿಸುತ್ತಾರೆ. ಅವರು ನಾವು ಮಾಂಸ ತಿನ್ನುವಿದಲ್ಲ ಎನ್ನಬಹುದು. ಆದರೆ ನಾವು ಪ್ರಾಣೀಗಳ ಆಹಾಉ ಸೇವಿಸುವುದಿಲ್ಲ ಎನ್ನಲು ಸಾಧ್ಯವಿಲ್ಲ.

**ಇನ್ನ ಫೀ ಝಾಲಿಕ ಲಾ ಅಯತಲ್ಲಿಕೌಮಿಂ ಯತಫಕ್ಕರೂನ್** ಆಹಾರಗಳ ವಿವರದಲಿ ಕೊನೆಯಲ್ಲಿ ಹೇಳಿದ್ದು ಅದರಲ್ಲಿ ಚಿಂತಿಸುವವರಿಗೆ ಮತ್ತು ಯೋಚಿಸುವವರಿಗೆ ದೃಷ್ಟಾಂತವಿದೆ ಎಂದು. ಅವರಿಂದ ಒಂದು ವಿಷಯ ಅದರಿಂದ ಮನುಷ್ಯನ ಮಿದುಳು ಬೆಳವಣಿಗೆ ಹೊಂದುತ್ತದೆ ಎಂಬುದು ಸ್ಪಷ್ಟವಾಗಿದೆ. ಇನ್ನೊಂದು ವಿಷಯ ಪ್ರಕೃತಿಯಲ್ಲಿ ಚಿಂತನೆಯಿರುತ್ತದೆ. ಆದರೆ ಅದನ್ನು ಪ್ರೋತ್ಸಾಹಿಸಲು ಉತ್ತಮ ಆಹಾರದ ಅವಶ್ಯಕತೆ ಇರುತ್ತದೆ. ಅದೇ ರೀತಿ ಆಧ್ಯಾತ್ಮಿಕ ಚಿಮತನೆಯು ಸಹ ಮನುಷ್ಯನ ಒಲಗೆ ಇರುತ್ತವೆ. ಆದರೆ ಅದನ್ನು ಪ್ರೋತ್ಸಾಹಿಸಲು ಆಧ್ಯಾತ್ಮಿಕ ಆಹಾರದ ಅಗತ್ಯವಿರುತ್ತದೆ. ಎಲ್ಲ ಮನುಷ್ಯರು ಒಂದೇ ರೀತಿಯದ್ದಾಗಿವೆ. ಆದರೆ ಒಬ್ಬನು ಉನ್ನತ ದರ್ಜೆಯ ಚಿಂತನ ಶಕ್ತಿಯುಳ್ಳವನಾಗುತ್ತಾನೆ. ಇನ್ನೊಬ್ಬನು ಇಲ್ಲ ಅದಕ್ಕೆ ಕಾರಣವೆಂದರೆ ಒಬ್ಬನಿಗೆ ಉತ್ತಮ ಆಹಾರ ದೊರೆಯುತ್ತದೆ. ಇನ್ನೊಬ್ಬನಿಗೆ ಇಲ್ಲ, ಅದೇ ಸ್ಥಿತಿ ಆಧ್ಯಾತ್ಮಿಕ ಲೋಕದ್ದಾಗಿದೆ. ಎಲ್ಲ ಮನುಷ್ಯರಲ್ಲೂ ಅಲ್ಲಾಹನ ಪ್ರೇಮದ ಅಂಶವಿರುತ್ತದೆ. ಆದರೆ ಯಾವ ಮನುಷ್ಯನು ಆಧ್ಯಾತ್ಮಿಕ ಆಹಾರ ಸೇವಿಸುತ್ತಾನೋ ಅವನ ಚಿಮತನಶಕ್ತಿಯಲ್ಲಿ ಹೊಸ ಪ್ರಕಾಶ ಮತ್ತು ಜೀವ ಕಳೆ ಉಂಟಾಗುತ್ತದೆ. ಬೇರೆಯವನಿಗೆ ಇಲ್ಲ.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-137, ಮುದ್ರಣ 2010 ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 24 February 2022, Issue No. 08

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 07ರ ವರದಿಯ ಉಳಿದ ಭಾಗ)**

**ಹುಝೂರ್ ಅನ್ವರ್(ಅಬಿಅ) ಅವರ ಸಂಬೋಧನೆ.**

* ಅನಂತರ 1:45 ನಿಮಿಷಕ್ಕೆ ಹುಝೂರ್ ಅನ್ವರ್ ಸಂಬೋಧಿಸಿದರು.

"ತಶಹುದ್ ತವ್ವೂಝ್ ಮತ್ತು ತಸ್ಮಿಯಾ ನಂತರ ಹುಝೂರ್ ಅನ್ವರ್ ನುಡಿದರು. ಎಲ್ಲ ಗೌರವಾನ್ವಿತ ಅತಿಥಿಗಳಿಗೆ, ಅಸ್ಸಲಾಮು ಅಲೈಕುಂ ವ ರಹಮತುಲ್ಲಾಹ್ ವ ಬರಕಾತುಹು!

ಅಲ್ಲಾಹನ ಅನುಗ್ರಹದಿಂದ ಇಲ್ಲಿ ಅಹ್ಮದಿಯಾ ಜಮಾಅತಿಗೆ ಮಸೀದಿಯ ಅಡಿಗಲ್ಲು ಹಾಕುವ ಸೌಭಾಗ್ಯ ಇಂದು ದೊರೆಯುತ್ತಿದೆ. ಅಮೀರ್ ಸಾಹೇಬರು ತಮ್ಮ ಪರಿಚಯ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ಈ ಕ್ಷೇತ್ರವು ಬಹು ಸುಂದರವಾಗಿದೆ ಎಂದು. ಅದು ಸರಿಯಾದ ಮಾತೇ ಆಗಿದೆ. ಏಕೆಂದರೆ ನಾನು ರಸ್ತೆಯಲ್ಲಿ ಬರುತ್ತಿರುವಾಗಲೂ ಮತ್ತು ಇಲ್ಲಿ ಎಷ್ಟೆಲ್ಲ ಏನೆಲ್ಲ ನೋಡಿದ್ದೇನೆ. ರಸ್ತೆಯಲ್ಲಿ ಒಂದು ಹೋಟೆಲ್‌ನಲ್ಲಿ ತಂಗಿದ್ದೆವು ಅಲ್ಲಿನ ಐದನೆಯ ಮಹಡಿಯಿಂದ ನಾನು ನೋಡಿದೆ. ಇದು ನಿಜವಾಗಿಯೂ ಬಹು ಸುಂದರ ಕ್ಷೇತ್ರವಾಗಿದೆ. ಅದರ ನಿವಾಸಿಗಳು ಸಹ ಸುಂದರವಾಗಿರಬೇಕು ಆಗಲೆ ಈ ಕ್ಷೇತ್ರದ ಸುಂದರತೆ ಇನ್ನಷ್ಟು ಹೆಚ್ಚುತ್ತದೆ. ಸುಂದರತೆ ಎಂದರೆ ಕೇವಲ ರೂಪಗಳ ಸುಂದರತೆಯಲ್ಲ, ಬದಲು ಚರಿತ್ರೆಯು ಸುಂದರ ವಾಗಿರಬೇಕಾಗಿದೆ. ಸಾಮಾನ್ಯವಾಗಿ ಇಲ್ಲಿಯ ಜನರಲ್ಲಿ ಉತ್ತಮ ಚರಿತ್ರೆಯುವರಿದ್ದಾರೆ. ನಿಸ್ಸಂಶಯವಾಗಿ ಅಲ್ಲಾಹನು ನೈಸರ್ಗಿಕ ಸುಂದರತೆಯನ್ನು ದಯಪಾಲಿಸಿದ್ದಾನೆ. ಅದರೊಂದಿಗೆ ಈ ಜನರ ಚರಿತ್ರೆಯ ಸುಂದರತೆಯು ಈ ಕ್ಷೇತ್ರವನ್ನು ಇನ್ನಷ್ಟು ಸುಂದರಗೊಳಿಸಿದೆ. ಹಾಗೂ ನಿಮ್ಮನ್ನು ಸುಂದರವಾಗಿಸಿದ್ದಾನೆ.

ಹುಝೂರ್ ಅನ್ವರ್ ಹೇಳಿದರು. ಕೆಲವೊಮ್ಮೆ ಮನುಷ್ಯನು ತಮ್ಮ ಪ್ರಯತ್ನದಿಂದ ಸುಂದರತೆಯನ್ನು ಹೆಚ್ಚಿಸುತ್ತಾನೆ, ಕಟ್ಟಡಗಳು ಸಹ ಕ್ಷೇತ್ರವನ್ನು ಸುಂದರಗೊಳಿಸುತ್ತದೆ ಅಮೀರ್ ಸಾಹಿಬರು ಹೇಳಿದರು. ಇಲ್ಲಿ ಒಂದು ಸುಂದರವಾದ ಮಸೀದಿಯ ನಿರ್ಮಾಣದ ಭರವಸೆ ಹೊಂದಿದ್ದೇನೆ. ನಾನು ನಿಮ್ಮನ್ನು ಇದು ಸಹ ಹೇಳಬಯಸುತ್ತೇನೆ. ಕಟ್ಟಡದ ಸುಂದರತೆ ಒಂದು ಬಾಹ್ಯ ಸುಂದರತೆಯಾಗಿದೆ, ಅದಕ್ಕಿಂತ ಎಷೋ ಪಟ್ಟು ಸುಂದರತೆ ಅಲ್ಲಾಹನು ನಮಗೆ ತನ್ನ ಪ್ರಕೃತಿಯ ದೃಶ್ಯಗಳಲ್ಲಿ ನೀಡಿದ್ದಾನೆ. ಆದುದರಿಂದ ಮನುಷ್ಯನ ಪ್ರಯತ್ನದಿಂದ ಒಂದು ಸುಂದರ ಕಟ್ಟಡ ನಿರ್ಮಾಣ ಮಾಡುವುದು ದೊಡ್ಡ ಮಾತಲ್ಲ. ಯಾವುದೇ ಆರಾಧನಾ ಸ್ಥಳದ ನೈಜ ಸುಂದರತೆ ನಿರ್ಮಾಣ ಮಾಡುವ ಜನರ ಮೇಲೆ ಅವಲಂಬಿತವಾಗಿದೆ. ನನಗೆ ಭರವಸೆ ಇದೆ. ಇನ್‌ಶಾಅಲ್ಲಾಹ್ ಅಹ್ಮದಿಯಾ ಜಮಾಅತಿ ಸದಸ್ಯರು ಈ ಮಸೀದಿಯ ನಿರ್ಮಾಣವನ್ನು ಮಾಡುತ್ತಿದ್ದಾರೆ. ಈ ಕಟ್ಟಡದ ಸುಂದರತೆಯನ್ನು ತಮ್ಮ ಚರಿತ್ರೆಯ ಸುಂದರತೆಯಿಂದ ಇನ್ನಷ್ಟು ಬೆರಗು ನೀಡುವರು. ಅದರಿಂದ ಇಲ್ಲಿಯ ಸುಂದರ ಚರಿತ್ರೆಯ ಜನರ ಸುಂದರತೆಯಲಿ ಇನ್ನಷ್ಟು ಹೆಚ್ಚಳ ಕಾಣಬಹುದು.

ಹುಝೂರ್ ಅನ್ವರ್ ಹೇಳಿದರು. ಮಸೀದಿಗಳ ಸುಂದರತೆಯು ಆರಾಧನೆಯ ಹಕ್ಕು ಪಾಲಿಸುವುದರಿಂದ ಲಾಭವಾಗುತ್ತದೆ. ಮಸೀದಿಯ ನಿರ್ಮಾಣದ ಉದ್ದೇಶವೇ ಅಲ್ಲಾಹನ ಆರಾಧನೆ ಮಾಡುವುದಾಗಿದೆ. ಇದು ಅಲ್ಲಾಹನ ಗೃಹವಾಗಿದೆ. ಹಾಗೆ ಜನರು ಆರಾಧನೆಯ ಹಕ್ಕನ್ನು ಪಾಲಿಸುವವರಾದರೆ ಮಾತ್ರ ನಿಜವಾದ ಸುಂದರತೆ ಸ್ಪಷ್ಟವಾಗುತ್ತದೆ. ತನ್ನನ್ನು ಸೃಷ್ಟಿಸಿದ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವವರಾಗಬೇಕು. ಅದರ ಜೊತೆಯಲ್ಲಿ ಮಾನವೀಯತೆ ಇದೆ. ಅಲ್ಲಾಹನ ಸೃಷ್ಟಿಯ ಹಕ್ಕುಗಳನ್ನು ಸಹ ಪಾಲಿಸುವವರಾಗಬೇಕು. ಕೇವಲ ಆರಾಧನೆಯ ಹಕ್ಕು ಪಾಲಿಸುವುದರಿಂದ ಮಸೀದಿಯ ಉದ್ದೇಶ ಈಡೇರಿಸಿದಂತಾಗುವುದಿಲ್ಲ. ಮಾನವೀಯತೆ ಮೌಲ್ಯಗಳನ್ನು ಉನ್ನತ ಮಟ್ಟದವರೆಗೆ ಗಮನಿಸುವವರಾಗಬೇಕು. ನನ್ನ ಧರ್ಮದಲ್ಲಿ ಮಾನವೀಯತೆಯ ಮೌಲ್ಯಗಳಿಗೆ ತುಂಬ ಮಹತ್ವವಿದೆ. ಅದರ ಹೊರತು ಧರ್ಮ ಅಪೂರ್ಣವಾಗಿದೆ.

ಹುಝೂರ್ ಅನ್ವರ್ ಹೇಳಿದರು. ನನಗೆ ತುಂಬ ಸಂತೋಷವಾಯಿತು. ಈ ಸುಂದರ ಮಸೀದಿಯಲ್ಲಿ ಬರುವ ಅಹ್ಮದಿಯರು ತನ್ನ ಸೃಷ್ಟಿಕರ್ತನ ಆರಾಧನೆ ಮಾಡುವ ಜೊತೆಯಲ್ಲಿ ಅವನ ಸೃಷ್ಟಿಯ ಹಕ್ಕುಗಳನ್ನು ಸಹ ಪಾಲಿಸುವವರಾಗಬೇಕು. ಅವರ ಹಕ್ಕುಗಳನ್ನು ಪಾಲಿಸುವುದರೊಂದಿಗೆ ಅದನ್ನು ಸುಂದರಗೊಳಿಸಬೇಕು. ಈ ಸುಂದರತೆ ಉತ್ಪನ್ನವಾದರೆ ಮತ್ತೆ ಕೆಲ ತಪ್ಪು ಕಲ್ಪನೆಗಳಿಂದಾಗಿ, ಕೆಲ ಸ್ಥಳಗಳಲ್ಲಿ ಒಂದಿಷ್ಟು ವಿರೋಧವು ಆಯಿತು. ಅದರ ಬಗ್ಗೆ ನಮ್ಮ ನ್ಯಾಷನಲ್ ಅಮಿರ್ ಸಾಹಿಬರು ಹೇಳಿದ್ದಾರೆ. ಅದು ತಾನಾಗಿಯೇ ಮಸೀದಿ ನಿರ್ಮಾಣದ ಜೊತೆಯಲ್ಲಿಯೇ ಅಂತ್ಯಗೊಳ್ಳುವುದು. ಇನ್‌ಶಾ ಅಲ್ಲಾಹ್ ಹಾಗೆಯೇ ಆಗುವುದು ಎಂದು ನಾನು ಭರವಸೆ ಹೊಂದಿದ್ದೇನೆ.

ಹುಝೂರ್ ಅನ್ವರ್ ಹೇಳಿದರು. ಅಂತೂ ನಾನು ಅದರಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸ ಬಯಸುತ್ತೇನೆ. ಅದರಲ್ಲಿ ಮೇಯರ್ ಸಾಹಿಬರು ಶಾಮೀಲಾಗಿದ್ದಾರೆ. ಅವರ ಕೌನ್ಸಿಲ್ ಸಹ ಶಾಮೀಲಾಗಿದೆ. ಇಲ್ಲಿಯ ಜನರು ಶಾಮೀಲಾಗಿದ್ದಾರೆ. ಅವರೆಲ್ಲರೂ ಈ ಮಸೀದಿ ನಿರ್ಮಾಣದ ಅನುಮತಿ ಪಡೆಯುವಲ್ಲಿ ತಮ್ಮ ಪಾತ್ರ ವಹಿಸಿರುತ್ತಾರೆ. ಯಾವ ಉನ್ನತ ಮಟ್ಟದ ನೈತಿಕತೆಯನ್ನು ನೀವು ಪ್ರದರ್ಶಿಸಿದ್ದೀರೋ ಅದು ನಿರಂತರ ಜಾರಿಯಲ್ಲಿರಲಿ ಎಂಬುದು ನನ್ನ ಪ್ರಾರ್ಥನೆಯಾಗಿದೆ. ಅಹ್ಮದಿಯಾ ಜಮಾಅತಿನ ಸದಸ್ಯರು ಮತ್ತು ಸ್ಥಳೀಯ ಜನರ ಸಂಬಂಧಗಳು ಇನ್ನಷ್ಟು ಬಲಗೊಳ್ಳಲಿ. ಅಹ್ಮದಿಯಾ ಜಮಾಅತಿನ ಸದಸ್ಯರು ಸಹ ಈ ನಗರದ ಪ್ರಜೆಗಳಾಗಿದ್ದಾರೆ. ಈ ನೆಲೆಯಲ್ಲಿಯೂ ಅವರ ಕರ್ತವ್ಯಗಳು ಇಲ್ಲಿಯ ನಗರ ಪ್ರಜೆಗಳಂತೆಯೇ ಮತ್ತು ದೇಶದ ಪ್ರಜೆಗಳಂತೆಯೇ ಆಗಿರಬೇಕಾಗಿದೆ. ಇನ್‌ಶಾಅಲ್ಲಾಹ್‌ತಾಲಾ ಅಹ್ಮದಿಯಾ ಜಮಾಅತ್ . ನಾನು ಮೊದಲು ಹೇಳಿದಂತೆಯೇ, ತಮ್ಮ ಪಾತ್ರ ವಹಿಸಬೇಕು ನನ್ನ ಸಂತೋಷವು ಅದರಲ್ಲಿರುವುದು. ನಾನು ಭರವಸೆ ಹೊಂದಿದ್ದೇನೆ. ಇನ್‌ಶಾಅಲ್ಲಾಹ್ ಅವರು ಈ ಪಾತ್ರ ವಹಿಸುವರು. ಪರಸ್ಪರ ಸಂಬಂಧಗಳಲ್ಲಿ ಕೆಲವರಿಗೆ ಆತಂಕವಿದ್ದರೆ ಇನ್‌ಶಾಅಲ್ಲಾಹ್ ಆ ಆತಂಕಗಳನ್ನು ದೂರ ಮಾಡಲು ಭಗೀರಥ ಪ್ರಯತ್ನ ಮಾಡುವರು. ಇನ್‌ಶಾಅಲ್ಲಾಹ್ ಇದ್ದ ಅಲ್ಪ ಸ್ವಲ್ಪ ವಿರೋಧಗಳು ಸಹ ಅಂತ್ಯಗೊಳ್ಳುವುದು.

ಹುಝೂರ್ ಅನ್ವರ್ ಹೇಳಿದರು. ಕಮೀಷನರ್ ಸಾಹೇಬರು ಒಂದು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಇಲ್ಲಿ ಪ್ರತಿಯೊಬ್ಬರಿಗೆ ಮಾತನಾಡುವ ಸ್ವಾತಂತ್ರ್ಯವಿದೆ. ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಬಹುದು. ಅದರ ಅನುಮತಿ ಪ್ರತಿಯೊಬ್ಬ ನಾಗರಿಕನಿಗಿದೆ. ನಿಸ್ಸಂಶಯವಾಗಿ ಇರಬೇಕಾಗಿದೆ. ಆದರೆ ನಾವು ಇದರ ಜೊತೆಯಲ್ಲಿ ಹೇಳಬಯಸುವುದೇನೆಂದರೆ ಸ್ವಾತಂತ್ರ್ಯದ ಜೊತೆಯಲ್ಲಿ ಇನ್ನೊಬ್ಬರ ಭಾವನೆಗಳನ್ನು ಗೌರವಿಸುವುದು ಸಹ ಅನಿವಾರ್ಯವಾಗಿದೆ. ಒಂದು ವೇಳೆ ನಾನು ಇತರರ ಭಾವನೆಗಳನ್ನು ಗಮನಿಸಿಲ್ಲವಾದರೆ ಕೇವಲ ತನ್ನ ಸ್ವಾತಂತ್ರ್ಯ ಮಾತ್ರ ಬಯಸುವವನಾದರೆ ಮತ್ತು ಇಂತಹ ಸ್ವಾತಂತ್ರ್ಯದಿಂದ ಕೆಲವೊಮ್ಮೆ ದ್ವೇಷಗಳು ಹುಟ್ಟುತ್ತವೆ. ಪ್ರೀತಿಯ ಪರಿಸರ ಉಂಟುಮಾಡಲು ಸ್ವಾತಂತ್ರ್ಯ ಜೊತೆಯಲ್ಲಿ ಇತರರ ಭಾವನೆಗಳನ್ನು ಸಹ ಗಮನಿಸಬೇಕು. ಇನ್‌ಶಾಅಲ್ಲಾಹ್ ನಾವು ಅಹ್ಮದಿಯಾ ಜಮಾಅತಿನ ಸದಸ್ಯರು ಅದನ್ನು ಎಂದೆಂದಿಗೂ ಪಾಲಿಸುವೆವು. ಮೊದಲಿನಿಂದ ಮಾಡುತ್ತಾ ಬಂದಿದ್ದೇವೆ, ಮುಂದೆಯೂ ಮಾಡುವೆವು. ಅಂತೆಯೇ ಇತರರಿಂದಲೂ ಅದೇ ಭರವಸೆ ಹೊಂದಿದ್ದೇವೆ. ಸ್ವಾತಂತ್ರ್ಯವನ್ನು ಮಿತಿಯಿಲ್ಲದೆ ಹಾಗೆ ಮಾಡಬಾರದು. ಸ್ವಾತಂತ್ರ್ಯದಲ್ಲಿ ಕೆಲವು ನಿಬಂಧನೆಗಳಿರಬೇಕು. ಒಬ್ಬರು ಮತ್ತೊಬ್ಬರ ಭಾವನೆಗಳನ್ನು ಗೌರವಿಸಬೇಕು. ಆಗ ಮಾತ್ರ ಸಮಾಜದಲ್ಲಿ ಶಾಂತಿ ಪ್ರೀತಿಯ ಪರಿಸರ ನಿರ್ಮಾಣವಾಗಬಹುದು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.